# ಕನ್ನಡ ಸಾಹಿತ್ಯದಲ್ಲಿ ಆಧುನಿಕೋತ್ತರ ಕಾಲದ ಸ್ತ್ರೀವಾದಿ ಸಂವೇದನೆ

**ಮಹಾಂತೇಶ ದುರಗಣ್ಣವರ**
ಕನ್ನಡ ಅತಿಥಿ ಉಪನ್ಯಾಸಕರು, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ, ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯ, ಬೆಳಗಾವಿ.

**DOI: https://doi.org/10.5281/zenodo.18700548**

## ABSTRACT:

ಕನ್ನಡ ಸಾಹಿತ್ಯದಲ್ಲಿ ಆಧುನಿಕೋತ್ತರ ಕಾಲವು ಭಿನ್ನತೆ, ವೈಯಕ್ತಿಕ ಅನುಭವ, ಅಂಚಿನ ಧ್ವನಿಗಳು ಮತ್ತು ಪ್ರಬಲ ಸಾಂಸ್ಕೃತಿಕ ಸಂವೇದನೆಗಳನ್ನು ಒತ್ತಿ ಹೇಳುವ ಘಟ್ಟವಾಗಿದೆ. ಈ ಸಂದರ್ಭದಲ್ಲಿ ಸ್ತ್ರೀವಾದಿ ಸಂವೇದನೆಯು ಒಂದು ಮುಖ್ಯ ಸಾಹಿತ್ಯ ದಾರಿಯಾಗಿ ರೂಪುಗೊಂಡಿದೆ. ಇದು ಕೇವಲ ಪುರುಷ ಪ್ರಧಾನ ವ್ಯವಸ್ಥೆಯ ವಿರುದ್ಧದ ಪ್ರತಿರೋಧವಲ್ಲ; ಬದಲಾಗಿ ಸ್ತ್ರೀಯರ ಬದುಕಿನ ಸೂಕ್ಷ್ಮ ಅನುಭವಗಳು, ದೇಹ, ಮನಸ್ಸಿನ ರಾಜಕೀಯ ಗುರುತುಗಳ ಹುಡುಕಾಟ ಮತ್ತು ಸಾಮಾಜಿಕ ಅನ್ಯಾಯಗಳ ವಿರುದ್ಧದ ಅಂತರಂಗದ ಸ್ವರಗಳ ಅಭಿವ್ಯಕ್ತಿಯಾಗಿದೆ. ಈ ಸ್ತ್ರೀವಾದಿ ಸಂವೇದನೆಯ ಸಾಹಿತ್ಯವು 1980ರ ದಶಕದ ನಂತರ ಮನುಷ್ಯನ ಸಂಬಂಧಗಳನ್ನು ಲಿಂಗತ್ವದ ಹಿನ್ನೆಲೆಯಲ್ಲಿ ಮರುಪರಿಶೀಲಿಸುವ ದೃಷ್ಟಿಕೋನವಾಗಿ ಬೆಳೆಯಿತು. ಈ ಆಧುನಿಕೋತ್ತರ ಸ್ತ್ರೀವಾದಿ ಸಾಹಿತ್ಯವು 'ಒಬ್ಬ ಸ್ತ್ರೀ' ಎಂಬ ಏಕಮುಖ ಕಲ್ಪನೆಯನ್ನು ಪ್ರಶ್ನಿಸಿ ವರ್ಗ, ಜಾತಿ, ಧರ್ಮ, ಭಾಷೆ, ಗ್ರಾಮೀಣ, ನಗರ ಹಿನ್ನೆಲೆಗಳ ವೈವಿಧ್ಯತೆಯನ್ನು ಒಪ್ಪಿಕೊಳ್ಳುತ್ತದೆ. ಇದರಿಂದ ದಲಿತ ಸ್ತ್ರೀ, ಅಲ್ಪಸಂಖ್ಯಾತ ಸ್ತ್ರೀ, ಕಾರ್ಮಿಕ ಸ್ತ್ರೀ, ಗೃಹಿಣಿ, ನಗರ ಬೌದ್ಧಿಕ ಸ್ತ್ರೀ ಇಂತಹ ವಿಭಿನ್ನ ಗುರುತುಗಳ ಧ್ವನಿಗಳು ಸಾಹಿತ್ಯದಲ್ಲಿ ಕೇಳಿ ಬರುತ್ತವೆ. ಈ ಬರಹಗಳು ಅನುಭವಧಾರಿತವಾಗಿದ್ದು ಆತ್ಮಕಥನ, ಸ್ಮರಣೆ, ಕಥೆ, ಕವನ, ನಾಟಕ ಮುಂತಾದ ವಿವಿಧ ರೂಪಗಳಲ್ಲಿ ವ್ಯಕ್ತವಾಗುತ್ತದೆ.

ಸ್ತ್ರೀ ದೇಹ ಮತ್ತು ಅದರ ಮೇಲೆ ಸಮಾಜ ಹೇರಿದ ನಿಯಂತ್ರಣಗಳಾದ ವಿವಾಹ, ಮಾತೃತ್ವ, ಲೈಂಗಿಕತೆ, ಕೆಲಸದ ಜಗತ್ತು, ಕುಟುಂಬದ ರಾಜಕೀಯ ಇವು ಪ್ರಮುಖ ವಿಷಯಗಳಾಗಿವೆ. ಆಧುನಿಕೋತ್ತರ ಸ್ತ್ರೀವಾದಿ ಬರಹಗಳಲ್ಲಿ ಭಾಷೆ ಸಹ ಬದಲಾಗುತ್ತದೆ. ಸೌಂದರ್ಯಪೂರ್ಣ ಕಾವ್ಯಭಾಷೆಯ ಬದಲು ನೇರ ಅನುಭವಪೂರ್ಣ, ಕೆಲವೊಮ್ಮೆ ಮುರಿದ ಸಂಭಾಷಣಾ ಶೈಲಿ ಕಾಣುತ್ತದೆ. ಇದು ಸ್ತ್ರೀಯರ ಮೌನವನ್ನು ಮುರಿಯುವ ಪ್ರಯತ್ನವಾಗಿದೆ. ಈ ಕಾಲಘಟ್ಟದ ಲೇಖಕಿಯರಲ್ಲಿ ವೈದೇಹಿ, ಪ್ರತಿಭಾ ನಂದಕುಮಾರ, ಸ. ಉಷಾ, ನೇಮಿಚಂದ್ರ, ವಿಜಯಾದಬ್ಬೆ, ಸಬಿತ ಬನ್ನಾಡಿ, ಬಿ.ಟಿ. ಲಲಿತಾನಾಯಕ, ದು. ಸರಸ್ವತಿ, ಸ.ರಾ. ಅಬೂಬಕ್ಕರ್, ಗೀತಾ ನಾಗಭೂಷಣ್, ಅನುಪಮ ನಿರಂಜನ, ಬಾನು ಮುಷ್ತಾಕ್ ಹೀಗೆ ಮುಂತಾದವರ ಕೃತಿಗಳು ಅತ್ಯಂತ ಸೂಕ್ಷ್ಮವಾಗಿ ಹಾಗೂ ಆಳವಾದ ನೆಲೆಗಳಲ್ಲಿ ಶೋಧಿಸಿವೆ. ಆಧುನಿಕೋತ್ತರ ಕನ್ನಡ ಸಾಹಿತ್ಯದ ಸ್ತ್ರೀವಾದಿ ಸಂವೇದನೆ ಮಹಿಳೆಯ ಬದುಕನ್ನು ಅವಳ ದೃಷ್ಟಿಯಿಂದಲೇ ನಮಗೆ ಕಲಿಸುತ್ತದೆ. ಇದು ಸಮಾಜದ ಅಸಮಾನತೆಯ ವಿರುದ್ಧದ ಸಾಹಿತಿಕ ಹೋರಾಟವಾಗಿದ್ದು ಮಹಿಳೆಯ ಸ್ವಾತಂತ್ರ್ಯ, ಗೌರವ ಮತ್ತು ಮಾನವೀಯ ಹಕ್ಕುಗಳನ್ನು ಸ್ಥಾಪಿಸುವ ದಿಕ್ಕಿನಲ್ಲಿ ಮಹತ್ವದ ಪಾತ್ರ ವಹಿಸಿದೆ.

## KEYWORDS:

ಪುರುಷ ಪ್ರಧಾನ ಮೌಲ್ಯಗಳ ಪ್ರಶ್ನೆ, ಸ್ತ್ರೀ ಅನುಭವದ ಕೇಂದ್ರೀಕರಣ, ದೇಹ, ಗುರುತು, ಅಂಚಿನ ಸ್ತ್ರೀಯರ ಧ್ವನಿಗಳ ಪ್ರತಿನಿಧಿತ್ವ.

**ಪೀಠಿಕೆ:**

ಕನ್ನಡ ಸಾಹಿತ್ಯದಲ್ಲಿ ಆಧುನಿಕೋತ್ತರ ಕಾಲದ ಸ್ತ್ರೀವಾದಿ ಸಂವೇದನೆಯು 1980ರ ದಶಕದ ನಂತರ ಒಂದು ಪ್ರಬಲ ತಾತ್ವಿಕ ಹಾಗೂ ಸಾಹಿತ್ಯಿಕ ಚಳುವಳಿಯಾಗಿ ರೂಪುಗೊಂಡಿತು. ಆಧುನಿಕೋತ್ತರ ಸ್ತ್ರೀ ಸಂವೇದನೆಯು ಕನ್ನಡ ಸಾಹಿತ್ಯದಲ್ಲಿ ಹೆಣ್ಣು ಕೇವಲ 'ವಸ್ತು' ಅಥವಾ 'ಅಬಲೆ' ಎಂದು ಚಿತ್ರಿಸುವ ಹಳೆಯ ಮಾದರಿಗಳನ್ನು ಮುರಿದು ಅವಳನ್ನು 'ಸ್ವತಂತ್ರ', 'ಅಸ್ಮಿತೆ' ಮತ್ತು ಕರ್ತೃವಾಗಿ ಪ್ರತಿಷ್ಠಾಪಿಸಿದ್ದು, ಈ ಕಾಲಘಟ್ಟದಲ್ಲಿ ಹೆಣ್ಣಿನ ಶರೀರಪ್ರಜ್ಞೆ, ರಾಜಕೀಯ ಮತ್ತು ಅಂತರಂಗದ ಸಂಕೀರ್ಣತೆಗಳು, ಅನುಭವದ ಕೇಂದ್ರೀಕರಣ, ಪುರುಷ ಪ್ರಧಾನ ಮೌಲ್ಯಗಳ ಪ್ರಶ್ನೆ, ಭಾಷೆಯಲ್ಲಿನ ಸರಳತೆ ಮತ್ತು ನೇರತೆ ಪ್ರಮುಖ ವಸ್ತುಗಳಾದವು. ಇದು ಕೇವಲ ಪುರುಷ ವಿರೋಧಿಯಾಗಿ ಉಳಿಯದೆ ಜಾತಿ, ವರ್ಗ ಮತ್ತು ಧರ್ಮದ ಚೌಕಟ್ಟಿನಲ್ಲಿ ಹೆಣ್ಣು ಅನುಭವಿಸುವ ದುಪ್ಪಟ್ಟು ಶೋಷಣೆಯನ್ನು ಪ್ರಶ್ನಿಸಿತು. ಮೌನವನ್ನು ಪ್ರತಿರೋಧದ ಭಾಷೆಯನ್ನಾಗಿ ಬಳಸದೆ ಈ ಸಂವೇದನೆಯು ಅಡುಗೆಮನೆಯಿಂದ ಹಿಡಿದು ಜಾಗತಿಕ ವಿದ್ಯಮಾನಗಳವರೆಗೆ ಸ್ತ್ರೀ ದೃಷ್ಟಿಕೋನದಿಂದ ಹೊಸ ವ್ಯಾಖ್ಯಾನಗಳನ್ನು ನೀಡಿತು.

ವಿಜಯಾದಬ್ಬೆಯವರು ಸ್ತ್ರೀವಾದವನ್ನು ಒಂದು ವ್ಯವಸ್ಥಿತ ವಿಮರ್ಶಾ ಪದ್ಧತಿಯನ್ನಾಗಿ ರೂಪಿಸಿದರು. ಪಿತೃಪ್ರಧಾನ ವ್ಯವಸ್ಥೆಯು ನಿರ್ಮಿಸಿದ ಹೆಣ್ಣಿನ ಮಾದರಿಗಳನ್ನು ಮೀರಿ ಹೆಣ್ಣು ತನ್ನ ವ್ಯಕ್ತಿತ್ವವನ್ನು ಕಂಡುಕೊಳ್ಳಬೇಕು ಎಂದು ಪ್ರತಿಪಾದಿಸಿದರು. ವೈದೇಹಿ ಅವರು ಹೆಣ್ಣು ಮೌನವನ್ನು ಅಸಹಾಯಕತೆಯ ಬದಲು ಒಂದು ಪ್ರತಿರೋಧದ ಭಾಷೆಯನ್ನಾಗಿ ಚಿತ್ರಿಸಿದರು. ಅಡುಗೆ ಮನೆಯ ನಾಲ್ಕು ಗೋಡೆಗಳ ನಡುವೆ ನಡೆಯುವ ಅಧಿಕಾರ, ರಾಜಕಾರಣ ಮತ್ತು ಹೆಣ್ಣಿನ ಅಸ್ಮಿತೆಯ ತಲ್ಲಣಗಳನ್ನು ಇವರು ಅತ್ಯಂತ ಸೂಕ್ಷ್ಮವಾಗಿ ವಿಶ್ಲೇಷಿಸಿದ್ದಾರೆ. ಪ್ರತಿಭಾ ನಂದಕುಮಾರ ಅವರು ಹೆಣ್ಣಿನ ಶರೀರವು ಕೇವಲ ಭೋಗದ ವಸ್ತುವಲ್ಲ; ಅದು ಅವಳ ಅಸ್ಮಿತೆಯ ಭಾಗ ಎಂದು ಪ್ರತಿಪಾದಿಸಿದರು. ನೇಮಿಚಂದ್ರ ಅವರು ಸ್ತ್ರೀ ಸಂವೇದನೆಯನ್ನು ಜಾಗತಿಕ ದೃಷ್ಟಿಕೋನದಲ್ಲಿ ನೋಡುತ್ತಾರೆ. ಹೆಣ್ಣು ಕೇವಲ ಭಾವನಾತ್ಮಕ ಜೀವಿ ಅಲ್ಲ; ಅವಳು ಭೌತಿಕವಾಗಿ ಸಬಲಳು ಎಂಬುದನ್ನು ಸಾಬೀತುಪಡಿಸುತ್ತಾಳೆ. ಸಾರಾ ಅಬೂಬಕ್ಕರ್ ಅವರು ಧರ್ಮದ ಚೌಕಟ್ಟಿನಲ್ಲಿ ಹೆಣ್ಣಿನ ಮೇಲೆ ಹೇರಲಾಗುವ ಕಟ್ಟುಪಾಡುಗಳನ್ನು ಪ್ರಶ್ನಿಸುವುದು ಇವರ ಮುಖ್ಯ ವಿಚಾರವಾಗಿದೆ. ಬಿ.ಟಿ. ಲಲಿತಾನಾಯಕ್ ಹಾಗೂ ದು. ಸರಸ್ವತಿ ಇವರು ಜಾತಿ, ಲಿಂಗ ಎಂಬ ಎರಡು ನೆಲೆಯಲ್ಲಿ ಹೆಣ್ಣು ಅನುಭವಿಸುವ ದುಪ್ಪಟ್ಟು ಶೋಷಣೆಯನ್ನು ಚಿತ್ರಿಸಿದ್ದಾರೆ. ಸಬಿತಾ ಬನ್ನಾಡಿ ಮತ್ತು ಎಚ್.ಎಲ್. ಪುಷ್ಪ ಅವರು ಲಿಂಗತ್ವವೆಂಬುದು ಸಮಾಜವು ನಿರ್ಮಿಸಿದ ಒಂದು ಅಧಿಕಾರ ಸಂರಚನೆ ಎಂಬ ತಾತ್ವಿಕ ವಿಚಾರಗಳನ್ನು ಹಂಚಿಕೊಂಡಿದ್ದಾರೆ. ಹೀಗೆ ಇನ್ನೂ ಹಲವಾರು ಸ್ತ್ರೀವಾದಿ ಲೇಖಕಿಯರು ಆಧುನಿಕೋತ್ತರ ಕಾಲಘಟ್ಟದಲ್ಲಿ ಮಹಿಳೆಯ ಸಂಕಷ್ಟದ ಬದುಕನ್ನು ಚಿತ್ರಿಸಿರುವುದನ್ನು ಕಥೆ, ಕಾದಂಬರಿ, ಕವಿತೆಗಳು ಹಾಗೂ ಆತ್ಮಕಥನಗಳಂತಹ ಇತ್ಯಾದಿ ಸಾಹಿತ್ಯ ಪ್ರಕಾರಗಳಲ್ಲಿ ಗಮನಿಸಲಾಗಿದೆ.

ಕನ್ನಡ ಸಾಹಿತ್ಯದ ಆಧುನಿಕೋತ್ತರ ಕಾಲಘಟ್ಟದಲ್ಲಿ ವೈದೇಹಿ ಅವರು ಸ್ತ್ರೀ ಸಂವೇದನೆಯನ್ನು ಅತ್ಯಂತ ಸೂಕ್ಷ್ಮವಾಗಿ ಹಾಗೂ ಆಳವಾದ ನೆಲೆಗಳಲ್ಲಿ ಶೋಧಿಸಿದ ಪ್ರಮುಖ ಲೇಖಕಿ. ಅವರ ವಿಚಾರಗಳು ಕೇವಲ ಮೇಲ್ಪದರದ ಬಂಡಾಯವಾಗಿರದೆ ಹೆಣ್ಣಿನ ಅಂತರಂಗದ ಸಂಕೀರ್ಣತೆಯನ್ನು ಅನಾವರಣಗೊಳಿಸುತ್ತದೆ. ವೈದೇಹಿ ಅವರ ಸಾಹಿತ್ಯದ ದೊಡ್ಡ ವಿಶೇಷತೆ ಎಂದರೆ ಅವರು ಮೌನಕ್ಕೆ ನೀಡುವ ಅರ್ಥ. ಪುರುಷಪ್ರಧಾನ ಸಮಾಜದಲ್ಲಿ ಹೆಣ್ಣು ತನ್ನ ಅಸಹಾಯಕತೆಯಿಂದ ಮೌನವಾಗಿರುವುದಿಲ್ಲ; ಬದಲಾಗಿ ಆ ಮೌನವನ್ನೇ

ಒಂದು ಅಸ್ತ್ರವನ್ನಾಗಿ ಬಳಸಿ ವ್ಯವಸ್ಥೆಯನ್ನು ಪ್ರಶ್ನಿಸುತ್ತಾಳೆ. ಮೌನದ ಮೂಲಕವೇ ಅವಳು ತನ್ನ ಅಸ್ಮಿತೆಯನ್ನು ಕಾಪಾಡಿಕೊಳ್ಳುತ್ತಾಳೆ ಎಂಬುದು ಅವರ ನಿಲುವು. ಅಡುಗೆಮನೆ ಮತ್ತು ಮನೆಯ ದೈನಂದಿನ ಕೆಲಸಗಳ ನಡುವೆ ಹೆಣ್ಣಿನ ಅಸ್ಮಿತೆ ಹೇಗೆ ಎಂಬುದನ್ನು ವೈದೇಹಿ ಚಿತ್ರಿಸಿದ್ದಾರೆ. ಅವರ 'ಅಮ್ಮಚ್ಚಿಯೆಂಬ ನೆನಪು' ಅಂತಹ ಕಥೆಗಳಲ್ಲಿ ಕುಟುಂಬದ ಒಳಗಿರುವ ಅಧಿಕಾರಶಾಹಿಯನ್ನು ಅವರು ಬೆತ್ತಲೆಗೊಳಿಸುತ್ತಾರೆ. ಅವರ ದೃಷ್ಟಿಯಲ್ಲಿ ಮನೆಯೆಂಬುದು ಕೇವಲ ವಾಸಸ್ಥಾನವಲ್ಲ; ಅದು ಸ್ತ್ರೀ–ಪುರುಷರ ನಡುವಿನ ಶಕ್ತಿ, ಸಂಘರ್ಷದ ತಾಣ. ಸ್ತ್ರೀ ದೇಹವನ್ನು ಕೇವಲ ಭೋಗದ ವಸ್ತುವನ್ನಾಗಿ ಅಥವಾ ತಾಯಿತನದ ಯಂತ್ರವಾಗಿ ನೋಡುವ ದೃಷ್ಟಿಕೋನವನ್ನು ವೈದೇಹಿ ತಿರಸ್ಕರಿಸಿದ್ದಾರೆ. ಹೆಣ್ಣಿನ ದೇಹವು ಅವಳ ಅನುಭವಗಳ, ನೋವಿನ ಮತ್ತು ಸೃಜನಶೀಲತೆಯ ಕೇಂದ್ರ. ಅವರ 'ಬಿಂದು ಬಿಂದಿಗೆ' ಅಂತಹ ಕವನಗಳಲ್ಲಿ ಹೆಣ್ಣಿನ ದೇಹವು ಪ್ರಕೃತಿಯ ಚೈತನ್ಯದೊಂದಿಗೆ ಬೆಸೆಯುವ ವಿಚಾರ ವ್ಯಕ್ತವಾಗಿದೆ.

**"ಬಿಂದು ಬಿಂದು ಸೇರಿ ಬಿಂದಿಗೆ ತುಂಬುವುದಷ್ಟೇ ಅಲ್ಲ**
**ಬಿಂದಿಗೆ ಒಳಗೆ ಬಿಂದು ತನ್ನತನವ ಕಳೆದುಕೊಳ್ಳುವುದೂ ಅಲ್ಲ**
**ಹನಿಯ ಒಳಗೆ ಕಡಲಿದೆ, ಕಡಲ ಒಳಗೆ ಹನಿಯಿದೆ**
**ಬಿಂದಿಗೆಯ ಒಟ್ಟಾರೆ ತೂಕದಲ್ಲಿ ನನ್ನ ಹನಿಯೂ ಬೆರೆತಿದೆ"**[1]

ಇಲ್ಲಿ 'ಬಿಂದಿಗೆ' ಎಂಬುದು ಸಂಸಾರ ಅಥವಾ ಸಮಾಜದ ಸಂಕೇತವಾದರೆ; ಬಿಂದು ಎಂಬುದು ಹೆಣ್ಣಿನ ಅಸ್ತಿತ್ವದ ಸಂಕೇತ. ಹೆಣ್ಣು 'ಸಂಸಾರ' ಎಂಬ ಬಿಂದಿಗೆಯನ್ನು ತುಂಬಿಸಲು ತನ್ನನ್ನೇ ತಾನು ಧಾರೆಯೆರೆಯುತ್ತಾಳೆ. ಆದರೆ ಹಾಗೆ ಬೆರೆಯುವಾಗ ಅವಳು ತನ್ನ ಸ್ವಂತಿಕೆ ಅಥವಾ ತನ್ಮಯತೆಯನ್ನು ಕಳೆದುಕೊಳ್ಳಬಾರದು ಎಂಬುದು ವೈದೇಹಿಯವರ ಆಶಯ. ಬಿಂದಿಗೆಯ ತೂಕ ಹೆಚ್ಚಾಗಿರುವುದರಿಂದ ಅದರಲ್ಲಿರುವ ಪ್ರತಿಯೊಂದು ಹನಿಯಿಂದಲೇ ಅಂದರೆ ಸಮಾಜದ ಅಥವಾ ಕುಟುಂಬದ ಉನ್ನತಿಯಲ್ಲಿ ಹೆಣ್ಣಿನ ಕೊಡುಗೆ ಅಪಾರ. ಅವಳಿಲ್ಲದ ಬಿಂದಿಗೆ ತುಂಬಲಾರದು. ಈ ಸಾಲುಗಳ ಮೂಲಕ ಹೆಣ್ಣಿನ ಶ್ರಮದ ಮೌಲ್ಯವನ್ನು ಕವಯಿತ್ರಿಯವರು ಎತ್ತಿ ಹಿಡಿದಿದ್ದಾರೆ. ಹನಿಯ ಒಳಗೆ ಕಡಲಿದೆ ಎಂಬ ರೂಪಕವೂ ಅತ್ಯಂತ ದಾರ್ಶನಿಕವಾದದ್ದು. ಮೇಲ್ನೋಟಕ್ಕೆ ಅಬಲೆಯಾಗಿ ಅಥವಾ ಮೃದುವಾಗಿ ಕಾಣುವ ಹೆಣ್ಣಿನೊಳಗೆ ಸಮುದ್ರದಂತಹ ಗಾಂಭೀರ್ಯ ಮತ್ತು ಶಕ್ತಿ ಇದೆ ಎಂಬುದನ್ನು ವೈದೇಹಿ ಸೂಚಿಸುತ್ತಾರೆ. ಇದು ಆಧುನಿಕೋತ್ತರ ಸ್ತ್ರೀ ಸಂವೇದನೆಯ ಪ್ರಮುಖ ಲಕ್ಷಣವಾದ ಆತ್ಮ ಗೌರವವನ್ನು ಬಿಂಬಿಸುತ್ತದೆ. ಬಿಂದಿಗೆಯೊಂದಿಗೆ ಬೆರೆತ ಮೇಲೂ ಬಿಂದು ತನ್ನ ಅಸ್ತಿತ್ವವನ್ನು ಗುರುತಿಸಿಕೊಳ್ಳುವ ಹಂಬಲವನ್ನು, ವೈವಾಹಿಕ ಜೀವನದ ಬಂಧನದ ನಡುವೆಯೂ ತನ್ನ ವೈಯಕ್ತಿಕ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಬೇಕು ಎಂಬ ವಿಚಾರವನ್ನು ಪ್ರತಿಪಾದಿಸುತ್ತದೆ. ವೈದೇಹಿಯವರ ಈ ಕವಿತೆಯು ಸ್ತ್ರೀವಾದವನ್ನು ಅಬ್ಬರವಿಲ್ಲದೆ ಅತ್ಯಂತ ಗೌರವಯುತವಾಗಿ ಮತ್ತು ವೈಚಾರಿಕವಾಗಿ ಮಂಡಿಸುತ್ತದೆ.

ಪ್ರತಿಭಾ ನಂದಕುಮಾರ್ ಅವರ ವಿಚಾರಗಳು ಅತ್ಯಂತ ನೇರ, ದಿಟ್ಟ ಮತ್ತು ವಿಸ್ಫೋಟಕವಾಗಿವೆ. ಪಿತೃ ಪ್ರಧಾನ ವ್ಯವಸ್ಥೆಯ ಸಾಧ್ಯತೆಯ ಮುಖವಾಡಗಳನ್ನು ಕಳಚುವ ಸ್ತ್ರೀವಾದಿ ಸಂವೇದನೆಯ ಪ್ರಮುಖ ಅಂಗಗಳನ್ನು ಈ ಕೆಳಗಿನಂತೆ ನೋಡಲಾಗಿದೆ. ಇವರ ಪ್ರಕಾರ ಹೆಣ್ಣಿನ ದೇಹ ಕೇವಲ ಭೋಗದ ವಸ್ತುವಲ್ಲ; ಅದು ಅವಳ ಅಸ್ಮಿತೆಯ ಕೇಂದ್ರ. ಸ್ತ್ರೀ ದೇಹದ ಮೇಲಿನ ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ ನಿಯಂತ್ರಣವನ್ನು ಇವರು ಕಟುವಾಗಿ ಪ್ರಶ್ನಿಸಿದ್ದಾರೆ. ಹೆಣ್ಣು ತನ್ನ ದೇಹದ ಬಯಕೆಗಳನ್ನು ಮತ್ತು ಬದಲಾವಣೆಗಳ ಬಗ್ಗೆ ಯಾವುದೇ ಸಂಕೋಚವಿಲ್ಲದೆ ಅಭಿವ್ಯಕ್ತಿಸಬೇಕು ಎಂಬುದು ಇವರ ನಿಲುವು. ಸಮಾಜವು ಹೆಣ್ಣನ್ನು ಸದಾ

ತ್ಯಾಗಮಯಿಯಾಗಿ, ಇತರರಿಗಾಗಿ ಬದುಕುವವಳಾಗಿ ಚಿತ್ರಿಸುತ್ತದೆ. ಆದರೆ ಪ್ರತಿಭಾ ಅವರು ಹೆಣ್ಣು ಮೊದಲು ತನ್ನನ್ನು ತಾನು ಪ್ರೀತಿಸಬೇಕು, ತನ್ನ ವ್ಯಕ್ತಿತ್ವವನ್ನು ಸಂಭ್ರಮಿಸಬೇಕು ಎಂದು ಪ್ರತಿಪಾದಿಸುತ್ತಾರೆ. ಅವರ 'ನಾವು ಹುಡುಗಿಯರೇ ಹೀಗೆ' ಎಂಬ ಕವಿತೆಗಳಲ್ಲಿ ಸ್ವಾಯತ್ತತೆ ಎದ್ದು ಕಾಣುತ್ತದೆ. ಆಧುನಿಕ ನಗರ ಜೀವನದಲ್ಲಿ ಉದ್ಯೋಗಸ್ಥ ಮಹಿಳೆಯಾಗಿ ಹೆಣ್ಣು ಎದುರಿಸುತ್ತಿರುವ ಯಾಂತ್ರಿಕತೆ, ಒಂಟಿತನ ಮತ್ತು ಪುರುಷ ಸಹೋದ್ಯೋಗಿಗಳ ದೃಷ್ಟಿಕೋನವನ್ನು ಇವರು ವಿಮರ್ಶಿಸುತ್ತಾರೆ. ನಗರದ ಬದುಕು ನೀಡುವ ಸ್ವಾತಂತ್ರ್ಯದ ಜೊತೆಗೆ ಬರುವ ಹೊಸ ಬಗೆಯ ಶೋಷಣೆಗಳ ಬಗ್ಗೆ ಇವರು ವೈಚಾರಿಕವಾಗಿ ಚರ್ಚಿಸುತ್ತಾರೆ. ಹೆಣ್ಣಿನ ನೋವು ಸಿಟ್ಟನ್ನು ವ್ಯಕ್ತಪಡಿಸಲು ಪುರುಷ ನಿರ್ಮಿತ 'ಮೃದು ಭಾಷೆ' ಸಾಕಾಗುವದಿಲ್ಲ ಎಂಬುದು ಇವರ ನಂಬಿಕೆ. ಆದ್ದರಿಂದಲೇ ಇವರ ಕಾವ್ಯದ ಭಾಷೆ ಹಸಿ–ಬಿಸಿಯಾಗಿ ನೇರವಾಗಿ ಮತ್ತು ವ್ಯವಸ್ಥೆಯ ಕಪಟತನಕ್ಕೆ ಚುಚ್ಚುವಂತಿರುತ್ತವೆ. ಸಂಪ್ರದಾಯದ ಲಕ್ಷ್ಮಣರೇಖೆಗಳನ್ನು ದಾಟುವುದು ಇವರ ಸಂವೇದನೆಯ ಭಾಗವಾಗಿದೆ. ಮದುವೆ ಮತ್ತು ಸಂಸಾರವೆಂಬ ಚೌಕಟ್ಟನ್ನು ಹೆಣ್ಣಿನ ಸೃಜನಶೀಲತೆಯನ್ನು ಹೇಗೆ ಕೊಲ್ಲುತ್ತದೆ ಎಂಬುದನ್ನು ಇವರು ಅನೇಕ ಕವಿತೆಗಳಲ್ಲಿ ಚಿತ್ರಿಸಿದ್ದಾರೆ. ಹೆಣ್ಣು ಕೇವಲ ಒಬ್ಬ ಪತ್ನಿಯಾಗಿ ಉಳಿಯದೆ ತನ್ನದೇ ಆದ ವ್ಯಕ್ತಿತ್ವವನ್ನು ಹೊಂದಿರಬೇಕು ಎಂಬುದು ಇವರ ಆಶಯ. ವೈದೇಹಿಯವರ ಸಂವೇದನೆಯಲ್ಲಿ ಮೌನ ಪ್ರಧಾನವಾಗಿದ್ದರೆ, ಪ್ರತಿಭಾ ನಂದಕುಮಾರ ಅವರದು ಶೋಷಣೆ ಅಥವಾ ನೇರ ಅಭಿವ್ಯಕ್ತಿ ಪ್ರಧಾನವಾಗಿದೆ. ಇವರು ಹೆಣ್ಣನ್ನು ಅಬಲೆಯ ಸ್ಥಾನದಿಂದ ಸಬಲೆಯ ಸ್ಥಾನಕ್ಕೆ ತಂದು ನಿಲ್ಲಿಸಿದ ಆಧುನಿಕೋತ್ತರ ಧ್ವನಿಯಾಗಿರುವುದನ್ನು ಅವರ ಕವಿತೆಗಳ ಮೂಲಕ ತಿಳಿಯಬಹುದು.

**"ಹೌದು ಕಣೆ ಉಷಾ...**
**ನಾವು ಹುಡುಗಿಯರೇ ಹೀಗೆ...**
**ಏನೇನೋ ವಟಗುಟ್ಟಿದರೂ**
**ಹೇಳಬೇಕಾದದ್ದನ್ನೂ ಹೇಳದೆ**
**ಏನೇನೆಲ್ಲಾ ಅನುಭವಿಸಿ ಸಾಯುತ್ತೇವೆ**
**..................................................**
**..................................................**
**ಗಂಡನಲ್ಲಿ 'ಅವನನ್ನು' ಹುಡುಕುತ್ತೇವೆ**
**ಗಂಡನಿಗೆ ಮಾತ್ರ ಅದರ ಸುಳಿವು**
**ಸಿಗದಂತೆ ನಟಿಸುತ್ತೇವೆ**
**ಅಷ್ಟರಲ್ಲಿ ಒತ್ತಿಟ್ಟ ಭಾವನೆಗಳೆಲ್ಲ**
**ಹರಳಾಗಿ ಬಿಟ್ಟಿರುತ್ತವೆ**
**ಅರಳುವುದೇ ಇಲ್ಲ ಉಷಾ..."[2]**

ಅದೆಷ್ಟು ಮೌನಗಳ ಭಾರ ಇದೆ ಈ ಕವಿತೆಯಲ್ಲಿ! ತುಂಬಾ ನಿಜವಾಗಿಯೂ ಮನಸ್ಸಿಗೆ ತಟ್ಟುವಂತಿದೆ. ಈ ಕವಿತೆ ಹುಡುಗಿಯರೊಳಗೆ ಹೇಳಲಾರದ ಪ್ರೀತಿ, ಭಯ, ಸಂಕುಚಿತತೆ ಮತ್ತು ಸಮಾಜದ ಕಟ್ಟುಗಳಿಂದ ಹುಟ್ಟುವ ಮೌನದ ದುರಂತವನ್ನು ಹೋಲುತ್ತದೆ. ಇದು ಒಬ್ಬಳ ಕಥೆ ಮಾತ್ರವಲ್ಲ; ಪೀಳಿಗೆಯಿಂದ ಪೀಳಿಗೆಗೆ ಮರುಕಳಿಸುವ ಭಾವನಾತ್ಮಕ ಅನುಭವ. ಇಲ್ಲಿ ಕವಯತ್ರಿಯವರು ಬಳಸಿರುವ ಉಪಮೆ ತುಂಬಾ ಶಕ್ತಿಶಾಲಿ. ಹುಡುಗಿಯರು ತಮ್ಮ ಭಾವನೆಗಳನ್ನು ಸ್ವಾಭಾವಿಕವಾಗಿ ಹೊರಹಾಕುವುದಿಲ್ಲ, ಅವುಗಳನ್ನು ಒತ್ತಿ, ಮರೆಮಾಚಿ, ಗಟ್ಟಿ ಮಾಡಿ ಒಟ್ಟಿಗೆ ಸಹಿಸಿಕೊಂಡಿರುತ್ತಾರೆ. ಇದು ವೈಯಕ್ತಿಕ ಭಯ ಮಾತ್ರವಲ್ಲ; ಸಂಸ್ಕಾರ ಹೆಣ್ಣಿಗೆ ತಕ್ಕದ್ದು. 'ಮೊದಲು ಹೇಳಬಾರದು' ಎಂಬ ಸಮಾಜದ ಕಲ್ಪನೆಗಳ ಪರಿಣಾಮ. ಈ

ಕವಿತೆಯು ಹೆಣ್ಣಿನ ಭಾವನಾತ್ಮಕ ಪ್ರಾಮಾಣಿಕತೆ ಮತ್ತು ಸಾಮಾಜಿಕತೆ ನಡುವಿನ ಸಂಘರ್ಷ ತೋರಿಸುತ್ತದೆ. ಅವಳು ಪ್ರೀತಿಸುತ್ತಾಳೆ ಆದರೆ ಹೇಳಲು ಕಲಿಸಲ್ಪಟ್ಟಿಲ್ಲ. ಅವಳ ಪ್ರೀತಿ ನೇರವಾಗಿಲ್ಲ; ಸಂಕೇತಗಳಲ್ಲಿ, ನೋಟಗಳಲ್ಲಿ, ಮೌನದಲ್ಲಿ ಅಡಗಿದೆ. ಆದರೆ ಸಮಸ್ಯೆ ಏನೆಂದರೆ 'ಅದನ್ನು ಅರ್ಥಮಾಡಿಕೊಳ್ಳಲಾರದೆ ಹುಡುಗರು ಕೈ ತಪ್ಪಿದಾಗ ಇದು ಸಂಬಂಧ ದುರಂತದ ಮೂಲ, ಹೇಳದ ಪ್ರೀತಿ, ಅರ್ಥವಾಗದ ಭಾವನೆ. ಕೊನೆಗೆ ಬೇರೆ ಯಾರನ್ನೊ ಮದುವೆಯಾಗಬೇಕಾದಾಗ ನಾವೇ ದುರಂತ ನಾಯಕಿಯರೆಂದು ಭ್ರಮಿಸಿ' ಇಲ್ಲಿ ಅವರು ಆತ್ಮ ವಿಮರ್ಶೆಯತ್ತ ತಿರುಗುವುದನ್ನು ನೋಡಬಹುದು. ಹುಡುಗಿಯರು ತಮ್ಮ ನೋವಿಗೆ ಕಾರಣವಾಗಿರುವುದು ಸಮಾಜವೇನಾ? ಸ್ವತಃ ತಮ್ಮ ನೋವಿಗೆ ಮೌನವೇನಾ? ಕವಿತೆ ಇದನ್ನು ನೇರವಾಗಿ ಆರೋಪಿಸುವುದಿಲ್ಲ ಆದರೆ ಓದುಗರ ಮನಸ್ಸಿನಲ್ಲಿ ಪ್ರಶ್ನೆ ಹುಟ್ಟುತ್ತದೆ. 'ಗಂಡನಲ್ಲಿ ಅವನನ್ನು ಹುಡುಕುತ್ತೇವೆ. ಗಂಡನಿಗೆ ಮಾತ್ರ ಅದರ ಸುಳಿವು ಸಿಗದಂತೆ ದಾಟಿಸುತ್ತೇವೆ' ಇದು ಕವಿತೆಯ ಅತ್ಯಂತ ನೋವು ತುಂಬಿದ ಭಾಗ. ಇಲ್ಲಿ ಮನಸ್ಸು ಭೂತಕಾಲದಲ್ಲಿ; ಜೀವನ ವರ್ತಮಾನ ಕಾಲದಲ್ಲಿ; ಭಾವನೆಗಳು ಯಾರಿಗೂ ಗೊತ್ತಾಗದ ಗುಪ್ತ ಸಮಾಧಿ. ಇದು ಕೇವಲ ಪ್ರೇಮ ವಿಫಲತೆಯ ಕಥೆ ಅಲ್ಲ; ಅದು ಭಾವನೆಗಳನ್ನು ಬದುಕಲು ಅವಕಾಶ ಸಿಗದ ಹೆಣ್ಣಿನ ಒಳ ಜೀವನ. 'ಒತ್ತಿಟ್ಟ ಭಾವನೆಗಳೆಲ್ಲ ಹರಳಾಗಿ ಬಿಟ್ಟಿರುತ್ತವೆ ಅರಳುವುದೇ ಇಲ್ಲ ಉಷಾ...' ಇಲ್ಲಿ ಹರಳು ಅಂದರೆ ಕಲ್ಲಾಗಿರುವ ಭಾವನೆ. ಅರಳದ ಹೂವು ಅಂದರೆ ಬದುಕದ ಪ್ರೀತಿ. ಒಮ್ಮೆ ಹೇಳದ ಭಾವನೆಗಳು ನಂತರ ಆರಂಭವಾಗುವುದಿಲ್ಲ. ಕೇವಲ ನೆನಪುಗಳ ಕಲ್ಲಾಗಿ ಬಿಡುತ್ತವೆ. ಪ್ರೀತಿ ಅರಳಬೇಕಾದ ಸಮಯದಲ್ಲಿ ಅರಳದಿದ್ದರೆ ಅದು ಮತ್ತೆ ಜೀವಂತವಾಗುವುದಿಲ್ಲ. ಒಟ್ಟಾರೆಯಾಗಿ ಈ ಕವಿತೆಯ ಸಂದೇಶ 'ಹೆಣ್ಣಿನ ಭಾವನೆಗೆ ಮೌನವೇ ಸಂಸ್ಕಾರ ಎಂದು ಕಲಿಸಿದ ಸಮಾಜವೇ ಅವಳ ಪ್ರೀತಿಯನ್ನು ಅರಳುವುದಕ್ಕೆ ಮುನ್ನವೇ ಕಲ್ಲಾಗಿಸುತ್ತದೆ. ಇದು ದೂರು ಕೂಡ ಹೌದು, ಸ್ವೀಕಾರ ಕೂಡ ಹೌದು ಮತ್ತು ಭವಿಷ್ಯದ ಹೆಣ್ಣುಮಕ್ಕಳಿಗೆ ಒಂದು ಮೌನದ ಎಚ್ಚರಿಕೆ ಕೂಡ.

ಕನ್ನಡದ ಆಧುನಿಕೋತ್ತರ ಸ್ತ್ರೀವಾದಿ ಕಾವ್ಯಲೋಕದಲ್ಲಿ ಅತ್ಯಂತ ವಿಶಿಷ್ಟವಾದದು. ಅವರ ವಿಚಾರಗಳು ಕೇವಲ ಪ್ರತಿಭಟನೆಯಾಗಿರದೆ ಹೆಚ್ಚಿನ ಚೈತನ್ಯದ ಉದಯ ಮತ್ತು ಸ್ವಯಂ ಅರಿವಿನ ಸಂಕೇತಗಳಾಗಿವೆ. ಇವರು ಸ್ತ್ರೀವಾದಿ ಸಂವೇದನೆಯಲ್ಲಿ ಪಿತೃ ಪ್ರಧಾನ ವ್ಯವಸ್ಥೆಯನ್ನು ವಿಮರ್ಶೆ ಮಾಡಿದ್ದಾರೆ. ಇವರ ದೃಷ್ಟಿಯಲ್ಲಿ ಸಮಾಜವು ಹೆಣ್ಣನ್ನು ತನ್ನ ಇಚ್ಛೆಯಂತೆ ಆಡಿಸುವ 'ತೊಗಲುಗೊಂಬೆ'ಯನ್ನಾಗಿ ಮಾಡಿದೆ. ಹೆಣ್ಣಿನ ಸ್ವಂತ ಇಚ್ಛೆಗಳಿಗಿಂತ ಸಮಾಜವು ಅವಳಿಗೆ ಹಾಕಿಕೊಟ್ಟ ಚೌಕಟ್ಟುಗಳೇ ಅವಳನ್ನು ನಿಯಂತ್ರಿಸುತ್ತವೆ ಎಂಬ ಸಂವೇದನೆ ಅವರ ಬರಹದಲ್ಲಿದೆ. 'ಹೆಣ್ಣಾಗಿ ಹುಟ್ಟಿದ್ದೆ ಒಂದು ಅಪರಾಧವೇ?' ಎಂಬ ಸಾಂಪ್ರದಾಯಿಕ ಪ್ರಶ್ನೆಯನ್ನು ಅವರು ನೈತಿಕವಾಗಿ ಸವಾಲು ಮಾಡುತ್ತಾರೆ. ಇವರು ಅಸ್ಮಿತೆಯ ಶೋಧ ಮತ್ತು ಪ್ರತಿರೋಧದ ಕುರಿತು ಅವರ ಪ್ರಸಿದ್ಧ ಕವಿತೆ 'ಆತ್ಮಕಥೆ'ಯಲ್ಲಿ ವ್ಯಕ್ತವಾಗುತ್ತದೆ. ಇದರಲ್ಲಿ ಹೆಣ್ಣು ಹುಟ್ಟಿನಿಂದಲೇ ಅನುಭವಿಸುವ ನಿಬಂಧಗಳನ್ನು ದಾಟುವುದು ವಿಮೋಚನೆಯ ದಾರಿ ಎಂದು ಅವರು ಪ್ರತಿಪಾದಿಸುತ್ತಾರೆ. 'ಹೌದು ಕಣೆ ಉಷಾ... ನಾವು ಹುಡುಗಿಯರೇ ಹೀಗೆ' ಎಂಬ ಪ್ರತಿಭಾ ನಂದಕುಮಾರ ಅವರ ಸಾಲುಗಳಿಗೆ ಉಷಾ ಅವರ ಕವಿತೆಗಳೇ ಪ್ರೇರಣೆಯಾಗಿವೆ. ಇವರ ವಿಚಾರಗಳು ಹೆಣ್ಣಿನ ಮೌನವನ್ನು ಭೇದಿಸಿ ಆಕೆಯನ್ನು ಮಾತುಗಾರಿಕೆಯತ್ತ ತರುತ್ತದೆ. ಮನೆಯೊಳಗಿನ ಶೋಷಣೆ ಮತ್ತು ಮೌನದ ಕುರಿತು, ಮನೆಯೊಳಗಿನ ಶ್ರಮದ ಗೌರವ ಮತ್ತು ಚೌಕಟ್ಟಿನಲ್ಲಿ ಹೆಣ್ಣಿನ ಸೃಜನಶೀಲತೆ ಹೇಗೆ ಕಮರಿ ಹೋಗುತ್ತದೆ ಎಂಬುದನ್ನು ಅವರು ಸೂಕ್ಷ್ಮವಾಗಿ ವಿಶ್ಲೇಷಿಸಿದ್ದಾರೆ. ಹೆಣ್ಣಿನ ದೈನಂದಿನ

ಬದುಕಿನ ನೋವುಗಳನ್ನು ಅವರು ಕಾವ್ಯದ ಮೂಲಕ ಸಾರ್ವಜನಿಕ ಚರ್ಚೆಗೆ ತಂದರು. ದೇಹ ಮತ್ತು ಅಂತರಂಗದ ಸಮನ್ವಯದ ಕುರಿತು ಚರ್ಚಿಸಿದ್ದಾರೆ. ಇತರೆ ಕೆಲವು ಸ್ತ್ರೀವಾದಿ ಲೇಖಕಿಯರಂತೆ ಕೇವಲ ದೇಹದ ರಾಜಕಾರಣಕ್ಕೆ ಸೀಮಿತವಾಗದೆ ಹೆಣ್ಣಿನ ಅಂತರಂಗದ ಸೂಕ್ಷ್ಮ ಭಾವನೆಗಳು ಮತ್ತು ಶರೀರದ ಆಸೆಗಳ ನಡುವಿನ ಸಂಬಂಧವನ್ನು ಅತ್ಯಂತ ಘನತೆಯಿಂದ ಚಿತ್ರಿಸಿದ್ದಾರೆ. ಇವರ ಸ್ತ್ರೀವಾದವು ಮಾನವೀಯ ನೆಲೆಯನ್ನು ಹೊಂದಿರುವಂತಹದ್ದು. ಹೆಣ್ಣಿಗೆ ತನ್ನ ಅಸ್ಮಿತೆಯ ಬಗ್ಗೆ ಉಂಟಾಗುವ ಹೊಸ ಅರಿವೇ ನಿಜವಾದ 'ಬೆಳಗು' ಎಂದು ಅವರು ನಂಬಿದ್ದಾರೆ. ಅಬಲೆಯ ಹಣೆಪಟ್ಟಿಯನ್ನು ಕಳಚಿ ಚೈತನ್ಯದ ಹಕ್ಕಿಯಾಗಿ ಹಾರುವ ಹಂಬಲ ಇವರ ವಿಚಾರಗಳ ಸಾರವಾಗಿದೆ. ಇವರು ಹೆಣ್ಣಿಗೆ ತನ್ನ ಶಕ್ತಿಯನ್ನು ಗುರುತಿಸಿ ವ್ಯವಸ್ಥೆಯ ವಿರುದ್ಧ ದೃಢವಾಗಿ ನಿಲ್ಲುವ ಧೈರ್ಯವನ್ನು ನೀಡುವಂತ ಕವಿತೆಗಳ ಮೂಲಕ ಹುರಿದುಂಬಿಸಿದ್ದಾರೆ.

ಸ. ಉಷಾ ಇವರ 'ಈ ನೆಲದ ಹಾಡು' ಕವನ ಸಂಕಲನದಲ್ಲಿ ಮೂಡಿಬಂದಿರುವ 'ಈಗಷ್ಟೇ ಬೆಳಗಾಯಿತು' ಎಂಬ ಕವಿತೆಯು ಸ್ತ್ರೀ ನೆಲೆಗಟ್ಟಿನಲ್ಲಿ ಒಂದು ಹೊಸ ಆಯಾಮವನ್ನು ತೆರೆದಿಡುತ್ತದೆ. 'ಬೆಳಗಾಯಿತು' ಎಂಬ ಪದವು ಕೇವಲ ಸೂರ್ಯೋದಯವನ್ನಲ್ಲ; ಬದಲಾಗಿ ಸ್ತ್ರೀಯ ಆತ್ಮಪ್ರಜ್ಞೆಯ ಜಾಗೃತಿಯನ್ನು ಸೂಚಿಸುತ್ತದೆ. ಸಮಾಜ ವಿಧಿಸಿದ ಕಟ್ಟುಪಾಡುಗಳು ಮತ್ತು ಮೌನವನ್ನು ಭೇದಿಸಿ ಹೊರಬರುವ ಹೆಣ್ಣಿನ ಹೊಸ ಹುಟ್ಟನ್ನು ಕವಯಿತ್ರಿ ಇಲ್ಲಿ ಚಿತ್ರಿಸಿದ್ದಾರೆ. ಈ ಕವಿತೆಯಲ್ಲಿ ಹಳೆಯ ಸಂಪ್ರದಾಯಗಳ ಕಹಿ ನೆನಪುಗಳು ಮತ್ತು ಸೀಮಿತ ಬದುಕನ್ನು ಕತ್ತಲು ಅಥವಾ ರಾತ್ರಿಗೆ ಹೋಲಿಸಲಾಗಿದೆ. ಬೆಳಗಿನ ಸೂರ್ಯನ ಕಿರಣಗಳು ಹೇಗೆ ಅಂಧಕಾರವನ್ನು ಓಡಿಸುತ್ತವೆಯೋ ಹಾಗೆಯೇ ಹೆಣ್ಣು ತನ್ನ ಸ್ವಂತಿಕೆಯನ್ನು ಕಂಡುಕೊಂಡಾಗ ಅವಳ ಬದುಕಿನ ಕತ್ತಲೆ ಸರಿದು ಹೊಸ ಭರವಸೆ ಮೂಡುತ್ತದೆ ಎಂಬುದು ಇಲ್ಲಿನ ಆಶಯ. ಈ ಕವಿತೆಯ ಮೂಲಕ ಹೆಣ್ಣು ಕೇವಲ ತ್ಯಾಗಮಯಿ ಅಥವಾ ಅಬಲೆಯಲ್ಲ; ಅವಳೂ ಕೂಡ ಸ್ವತಂತ್ರ ಆಲೋಚನೆಗಳುಳ್ಳ ಶಕ್ತಿಶಾಲಿ ವ್ಯಕ್ತಿತ್ವ ಎಂದು ಪ್ರತಿಪಾದಿಸುತ್ತಾರೆ. ಇಲ್ಲಿನ 'ಬೆಳಗು' ಸಾಂಪ್ರದಾಯಕ ಚೌಕಟ್ಟನ್ನು ಮೀರಿ ನಿಲ್ಲುವ ಬಂಡಾಯದ ಮತ್ತು ಆತ್ಮ ವಿಶ್ವಾಸದ ಸಂಕೇತವಾಗಿದೆ.

**"ಹವಳ ಎಳೆಯದಾಗಿದ್ದಾಗ**
**ಕಡಲ ತುಂಬಾ ಜಿಗಿದಾಡಿ ಚಾಡುತ್ತದೆ**
**ಎಳೆಯ ಕನ್ನಿಕೆ ಹಾಗೆ ಅದು ಹವಳದ ಮೊಗ್ಗು"**[3]

ಸ. ಉಷಾ ಅವರ 'ಹವಳದಾರಿ ಹೊತ್ತು' ಕವಿತೆಯಲ್ಲಿ ಕಂಡುಬರುವ ಈ ಸಾಲುಗಳು ಹೆಣ್ಣಿನ ಅಂತರಂಗದ ಹಂಬಲ ಮತ್ತು ಮೌನವನ್ನು ಸಹಜ ಘಲತೆಯನ್ನು ಕಾವ್ಯಾತ್ಮಕವಾಗಿ ಚಿತ್ರಿಸಿದ್ದಾರೆ. ಹವಳವು ಸಮುದ್ರದ ಆಳದಲ್ಲಿ ರೂಪುಗೊಳ್ಳುವಾಗ ಅದು ಎಳೆಯದಾಗಿದ್ದಾಗ ಅತ್ಯಂತ ಆಕರ್ಷಕ ಮತ್ತು ಚಟುವಟಿಕೆಯಿಂದ ಕೂಡಿರುತ್ತದೆ. ಕವಯಿತ್ರಿ ಇಲ್ಲಿ ಹವಳವನ್ನು 'ಕನ್ನಿಕೆ'ಗೆ ಅಥವಾ 'ಯುವತಿ'ಗೆ ಹೋಲಿಸಿದ್ದಾರೆ. ಕಡಲ ಅಲೆಗಳ ನಡುವೆ ಹವಳವು ಹೇಗೆ ಮುಕ್ತವಾಗಿ ಜಿಗಿದಾಡುತ್ತಿದೆಯೋ ಹಾಗೆಯೇ ಮಗು ಕೂಡ ತನ್ನ ಕನಸುಗಳ ಲೋಕದಲ್ಲಿ ವಿಹರಿಸುತ್ತಾಳೆ. 'ಕಡಲ ತುಂಬಾ ಜಿಗಿದಾಡಿ' ಎನ್ನುವ ಪ್ರಯೋಗವು ಸೀಮಿತವಲ್ಲದ ಸ್ವಾತಂತ್ರ್ಯವನ್ನು ಸೂಚಿಸುತ್ತದೆ. ಹೆಣ್ಣಿನ ಮನಸ್ಸು ಸಮಾಜದ ಕಟ್ಟುಪಾಡುಗಳಿಗೆ ಒಳಪಡುವ ಮೊದಲು ಅದು ಸಾಗರದಷ್ಟೇ ವಿಸ್ತಾರವಾದ ಹಂಬಲಗಳನ್ನು ಹೊಂದಿರುತ್ತದೆ. 'ಹವಳದ ಮೊಗ್ಗು' ಎಂಬ ರೂಪಕವು ಅವಳ ವ್ಯಕ್ತಿತ್ವ ಇನ್ನೂ ಪೂರ್ಣವಾಗಿ ಅರಳದೆ ಅನ್ವೇಷಣೆಯ ಹಂತದಲ್ಲಿರುವುದನ್ನು ಧ್ವನಿಸುತ್ತದೆ. ಹವಳವು ಬೆಳೆಯುತ್ತಾ ಹೋದಂತೆಲ್ಲ ಗಟ್ಟಿಯಾಗುತ್ತದೆ

ಆದರೆ ಅದು ಎಳೆಯದಾಗಿದ್ದಾಗ ಅತ್ಯಂತ ಮೃದು ಮತ್ತು ಸಂವೇದಶೀಲವಾಗಿರುತ್ತದೆ. ಅದೇ ರೀತಿ ಒಬ್ಬ ಯುವತಿಯ ಮನಸ್ಸು ಪ್ರೀತಿ, ಸ್ನೇಹ ಮತ್ತು ಹೊಸ ಅನುಭವಗಳಿಗೆ ಬಹಳ ಬೇಗನೆ ಸ್ಪಂದಿಸುತ್ತದೆ. ಉಷಾ ಅವರು ಈ ನುಡಿಯ ಮೂಲಕ ಪ್ರಕೃತಿಯ ಸೌಂದರ್ಯವಾದ ಹವಳ ಹಾಗೂ ಮನುಷ್ಯನ ಸಹಜ ಭಾವನೆಗಳ ನಡುವೆ ಅದ್ಭುತವಾದ ನಂಟನ್ನು ಕಲ್ಪಿಸಿದ್ದಾರೆ. ಹೆಣ್ಣಿನ ಅಂತರಂಗದ ಸ್ಫೋಟಕ ಮತ್ತು ಅವಳ ಅಸ್ಮಿತೆಯ ಹುಡುಕಾಟವನ್ನು ಲೈಂಗಿಕ ಮತ್ತು ಸಾಂಸ್ಕೃತಿಕ ನೆಲೆಗಟ್ಟಿನಲ್ಲಿ ಕಾಣಬಹುದಾಗಿದೆ.

ಕನ್ನಡದ ಪ್ರಮುಖ ಲೇಖಕಿಯಾದ ನೇಮಿಚಂದ್ರ ಅವರು ಆಧುನಿಕೋತ್ತರ ಕಾಲದ ಸ್ತ್ರೀವಾದಿ ಸಂವೇದನೆಯನ್ನು ತಮ್ಮ ಬರಹಗಳಲ್ಲಿ ಅತ್ಯಂತ ಪ್ರಬುದ್ಧವಾಗಿ ಮತ್ತು ವಾಸ್ತವಿಕವಾಗಿ ಮಂಡಿಸಿದ್ದಾರೆ. ಅವರ ವಿಚಾರಗಳು ಕೇವಲ ಭಾವನಾತ್ಮಕವಾಗಿರದೆ ತಾರ್ಕಿಕ ಮತ್ತು ವೈಜ್ಞಾನಿಕ ಹಿನ್ನೆಲೆಯನ್ನು ಹೊಂದಿರುತ್ತವೆ. ಇವರ ಸ್ತ್ರೀವಾದವು ಕಟುವಾದ ಪುರುಷ ವಿರೋಧಿಯಲ್ಲ; ಬದಲಾಗಿ ಸ್ತ್ರೀ–ಪುರುಷರು ಪರಸ್ಪರ ಗೌರವದಿಂದ ಮತ್ತು ಸಮಾನತೆಯಿಂದ ಬದುಕುವ ಕೌಟುಂಬಿಕ ಸೌಹಾರ್ದತೆಯನ್ನು ಬಯಸುವಂಥದ್ದು. ಅವರ ಕಥೆಗಳಲ್ಲಿನ ಸ್ತ್ರೀ ಪಾತ್ರಗಳು ಬದಲಾವಣೆಯನ್ನು ಬಯಸಿದರೂ ಸಮಾಜ ಮತ್ತು ಸಂಸಾರದ ಚೌಕಟ್ಟನ್ನು ಸಂಪೂರ್ಣವಾಗಿ ಒಡೆಯದೆ ಅದರೊಳಗೆ ತಮ್ಮ ಅಸ್ಮಿತೆಯನ್ನು ಕಂಡುಕೊಳ್ಳಲು ಪ್ರಯತ್ನಿಸುತ್ತವೆ. ಆಧುನಿಕೋತ್ತರ ಕಾಲದ ಸ್ತ್ರೀಯು ಕೇವಲ ಅಡುಗೆ ಮನೆಗೆ ಸೀಮಿತವಾಗದೆ ಜಗತ್ತನ್ನು ಅರಿಯುವ ಹಂಬಲ ಹೊಂದಿರಬೇಕೆಂದು ಅವರ ಆಶಯ. ಅವರ 'ಬದುಕು ಬದಲಿಸಬಹುದು' ಅಂಕಣ ಬರಹಗಳು ಮತ್ತು ಜೀವನ ಚರಿತ್ರೆಗಳು ಹೆಣ್ಣು ಮಕ್ಕಳಲ್ಲಿ ಆತ್ಮವಿಶ್ವಾಸ ತುಂಬುವ ಮತ್ತು ಸಾಧನೆಯ ಹಾದಿ ತೋರಿಸುವ ಸ್ಫೂರ್ತಿಯ ನೆಲೆಗಳಾಗಿವೆ.

ನೇಮಿಚಂದ್ರ ಅವರು ಇಂಜಿನಿಯರಿಂಗ್ ಕ್ಷೇತ್ರದಿಂದ ಬಂದವರಾಗಿದ್ದರಿಂದ ಅವರ ಸ್ತ್ರೀವಾದಿ ದೃಷ್ಟಿಕೋನವು ವೈಜ್ಞಾನಿಕ ಮತ್ತು ಜಾಗತಿಕ ನೆಲೆಗಟ್ಟಿನಲ್ಲಿದೆ. ಅವರ ಪ್ರವಾಸ ಕಥನಗಳಾದ 'ಒಂದು ಕನಸಿನ ಪಯಣ' ಮತ್ತು 'ಪೆರುವಿನ ಪವಿತ್ರ ಕಣಿವೆಯಲ್ಲಿ' ಹೆಣ್ಣೊಬ್ಬಳು ಒಬ್ಬಳೇ ಜಗತ್ತನ್ನು ಸುತ್ತುವ ಮೂಲಕ ತನ್ನ ಧೈರ್ಯ ಮತ್ತು ಸ್ವತಂತ್ರ ಅಸ್ತಿತ್ವವನ್ನು ಸಾಬೀತುಪಡಿಸುವುದನ್ನು ಚಿತ್ರಿಸುತ್ತದೆ. ಇವರ ಇನ್ನೊಂದು ಮಹತ್ವದ ಕೃತಿಯಾದ 'ಯಾದ್ ವಶೇಮ್' ಯಹೂದಿಗಳ ಮರಣ ಹೋಮದ ಹಿನ್ನೆಲೆಯಲ್ಲಿ ಬರೆಯಲ್ಪಟ್ಟಿದ್ದರೂ ಅದರಲ್ಲಿ ಮಾನವೀಯತೆ ಮತ್ತು ಸ್ತ್ರೀಯರ ಮೇಲಾಗುವ ದೌರ್ಜನ್ಯಗಳ ವಿರುದ್ಧದ ದನಿಯಿದೆ. ಅಧಿಕಾರದಾಹ ಮತ್ತು ಹಿಂಸೆಯು ಸ್ತ್ರೀ ಸಂವೇದನೆಯನ್ನು ಹೇಗೆ ಬಾಧಿಸುತ್ತದೆ ಎಂಬುದನ್ನು ಇಲ್ಲಿ ವಿಮರ್ಶಾತ್ಮಕವಾಗಿ ನೋಡಬಹುದು. ಹೆಣ್ಣು ವೃತ್ತಿ ಮತ್ತು ವೈಯಕ್ತಿಕ ಬದುಕಿನ ನಡುವೆ ಸಮತೋಲನ ಕಾಯ್ದುಕೊಳ್ಳುವುದು ಹಾಗೂ ತನ್ನ ನಿರ್ಧಾರಗಳನ್ನು ತಾನೇ ತೆಗೆದುಕೊಳ್ಳುವ ಹಂತಕ್ಕೆ ಬೆಳೆಯುವುದು ಆಧುನಿಕೋತ್ತರ ಸ್ತ್ರೀವಾದದ ಮುಖ್ಯ ಲಕ್ಷಣವಾಗಿದ್ದು, ನೇಮಿಚಂದ್ರರು ತಮ್ಮ ಜೀವನ ಮತ್ತು ಸಾಹಿತ್ಯ ಎರಡರಲ್ಲೂ ಇದನ್ನು ಪಾಲಿಸಿದ್ದಾರೆ.

ವಿಜಯಾದಬ್ಬೆ ಅವರು ಕನ್ನಡ ಸಾಹಿತ್ಯದಲ್ಲಿ ಸ್ತ್ರೀವಾದಿ ಚಿಂತನೆಯನ್ನು ಸಾಂಸ್ಥಿಕವಾಗಿ ಮತ್ತು ಸೈದ್ಧಾಂತಿಕವಾಗಿ ಮೊದಲು ರೂಪಿಸುವವರಲ್ಲಿ ಪ್ರಮುಖರು. ಆಧುನಿಕೋತ್ತರ ಸ್ತ್ರೀವಾದದ ಹಲವು ಲಕ್ಷಣಗಳು ಅವರ ಬರಹಗಳಲ್ಲಿ ಮುಂಚಿತವಾಗಿಯೇ ಕಂಡುಬರುತ್ತದೆ. ಕನ್ನಡದಲ್ಲಿ ಸ್ತ್ರೀವಾದಕ್ಕೆ ಒಂದು ಗಟ್ಟಿಯಾದ ತಾತ್ವಿಕ ಅಡಿಪಾಯ ಕೊಟ್ಟವರು ಇವರು. ಸ್ತ್ರೀ ಸಂಸ್ಕೃತಿಯನ್ನು ಪುನರ್ ರಚಿಸುವ ಅಗತ್ಯವನ್ನು ಅವರು ಬಲವಾಗಿ ಪ್ರತಿಪಾದಿಸಿದರು. ಕೇವಲ ಭಾವನಾತ್ಮಕವಲ್ಲದೆ ಶೋಷಣೆಯ ಆಳವಾದ ಅನುಭವ ಮತ್ತು ತಿಳುವಳಿಕೆಯಿಂದ ಸ್ತ್ರೀವಾದ ಹುಟ್ಟುತ್ತದೆ ಎಂಬುದು ಅವರ ನಂಬಿಕೆಯಾಗಿತ್ತು. ದಬ್ಬೆ ಅವರು ಸೌಮ್ಯ

ಸ್ವಭಾವದವರಾಗಿದ್ದರೂ ಅವರ ಬರಹಗಳಲ್ಲಿನ ಸ್ತ್ರೀವಾದಿ ದನಿ ಅತ್ಯಂತ ಸ್ಪಷ್ಟವಾಗಿತ್ತು.

'ನಾವು ತಲೆ ಎತ್ತದ ಹೊರತು ನಮಗೆ ಸುತ್ತುವರೆದ ಗಂಡಸರು ಕಣ್ಣಿನಂತೆ ಕಾಣುತ್ತಾರೆ' ಎಂಬಂತಹ ಅವರ ಸಾಲುಗಳು ಹೆಣ್ಣು ತನ್ನ ಸ್ವತಂತ್ರ ಅಸ್ಮಿತೆಯನ್ನು ಕಂಡುಕೊಳ್ಳುವ ಅನಿವಾರ್ಯತೆಯನ್ನು ಸಾರುತ್ತವೆ. ಇವರ ಸ್ತ್ರೀವಾದವು ಕೇವಲ ಲಿಂಗ ಸಂಘರ್ಷಕ್ಕೆ ಸೀಮಿತವಾಗದೆ ಮಾನವೀಯತೆಯ ನೆಲೆಗಟ್ಟಿನಲ್ಲಿದೆ. ಅವರ ಪ್ರಮುಖ ಕೃತಿಗಳಾದ 'ಮಹಿಳೆ ಸಾಹಿತ್ಯ ಸಮಾಜ' ಮತ್ತು 'ನಾರಿ ದಾರಿ ದಿಗಂತ' ಇವುಗಳಲ್ಲಿ ಮಹಿಳೆಯ ಸಾಮಾಜಿಕ ಸ್ಥಾನಮಾನ ಹಾಗೂ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯ ಸ್ವರೂಪವನ್ನು ಆಳವಾಗಿ ವಿಶ್ಲೇಷಿಸಿದ್ದಾರೆ. ಆಧುನಿಕೋತ್ತರ ಸ್ತ್ರೀವಾದವು 'ಏಕರೂಪದ ಹೆಣ್ಣು' ಎಂಬ ಕಲ್ಪನೆಯನ್ನು ಪ್ರಶ್ನಿಸುತ್ತದೆ. ಇವರು ಕೂಡ ತಮ್ಮ ಸಮತಾವೇದಿಕೆಯ ಮೂಲಕ ಲಿಂಗಸಮಾನತೆ ಮಾತ್ರವಲ್ಲದೆ ಜಾತಿ ತಾರತಮ್ಯ ಮತ್ತು ಸಾಮಾಜಿಕ ಅನ್ಯಾಯಗಳ ವಿರುದ್ಧವೂ ಹೋರಾಡಿದರು. ಅಂತಹ ಸ್ತ್ರೀ ಸಂವೇದನೆಯ ಕುರಿತು ಕೆಲವೊಂದು ನುಡಿಯನ್ನು ಇಲ್ಲಿ ಗಮನಿಸಬಹುದು.

**"ಹೇಗೆ ಸಹಿಸಿದೆ ತಾಯಿ**
**ತಾಯಿ ಆ ಲಂಕೆಯ ವನದಲ್ಲಿ ಹೆದರಿ ಗೂಡಾಗಿ ಕುಳಿತು**
**ಅವಮಾನದ ಬೆಂಕಿಯಲ್ಲಿ ಸೀದು ಕರಕಾಗುವಾಗ**
**ಹೇಗೆ ಸಹಿಸಿದೆ ತಾಯಿ?"**[4]

ವಿಜಯಾ ದಬ್ಬೆಯವರ ಈ ಕವಿತೆಯ ಸಾಲುಗಳು ಪುರಾಣದ ಸೀತೆಯ ಮೌನ ಮತ್ತು ಅವಮಾನವನ್ನು ಆಧುನಿಕ ಸ್ತ್ರೀವಾದದ ನೆಲೆಗಟ್ಟಿನಲ್ಲಿ ಮರು ಪ್ರಶ್ನಿಸುತ್ತವೆ. ಸಾಂಪ್ರದಾಯಿಕವಾಗಿ ಸೀತೆಯನ್ನು ಸಹನೆಯ ಮೂರ್ತಿ ಎಂದು ಪೂಜಿಸಲಾಗುತ್ತದೆ. ಆದರೆ ವಿಜಯಾ ದಬ್ಬೆಯವರು ಇಲ್ಲಿ ಸೀತೆಯ ಸಹನೆಯನ್ನು ಅಸಹಾಯಕತೆ ಎಂದು ಪ್ರಶ್ನಿಸುತ್ತಾರೆ. ಲಂಕೆಯ ಅಶೋಕ ವನದಲ್ಲಿ ಒಬ್ಬಂಟಿಯಾಗಿ ರಾವಣನಂತಹ ಪುರುಷನ ಸೆರೆಯಲ್ಲಿ ಸಮಾಜದ ಸಂಶಯದ ದೃಷ್ಟಿಯ ನಡುವೆ ಸೀತೆ ಅನುಭವಿಸಿದ ಮಾನಸಿಕ ಯಾತನೆಯನ್ನು 'ಅವಮಾನದ ಬೆಂಕಿ' ಎಂದು ಕರೆಯುತ್ತಾರೆ. 'ಹೇಗೆ ಸಹಿಸಿದೆ ತಾಯಿ' ಎಂಬ ಪ್ರಶ್ನೆಯಲ್ಲಿ ಕೇವಲ ಕುತೂಹಲವಲ್ಲ; ಬದಲಾಗಿ ವ್ಯವಸ್ಥೆಯ ವಿರುದ್ಧದ ಆಕ್ರೋಶವಿದೆ. ಸೀತೆ ಬೆಂಕಿಯಲ್ಲಿ ಬೆಂದು ಕರಕಾಗುವಂತಹ ಪರಿಸ್ಥಿತಿಯಲ್ಲೂ ಅವಳು ಮೌನವಾಗಿ ಉಳಿದಿದ್ದೇಕೆ? ಆ ಕಾಲದ ಪಿತೃ ಪ್ರಧಾನ ವ್ಯವಸ್ಥೆಯು ಹೆಣ್ಣಿನ ಮೇಲೆ ಹೇರಿದ ಸಹನೆ ಎಂಬ ಭಾವವನ್ನು ಕವಯಿತ್ರಿ ಇಲ್ಲಿ ಅಣಕಿಸುತ್ತಾರೆ. ಈ ಕವಿತೆಯ ಮೂಲಕ ಇಂದಿನ ಸ್ತ್ರೀಯರಿಗೂ ಒಂದು ಸಂದೇಶ ನೀಡುತ್ತಾರೆ. ಅನ್ಯಾಯ ಮತ್ತು ಅವಮಾನಗಳನ್ನು ಸಹಿಸಿಕೊಳ್ಳುವುದು ದೈವತ್ವವಲ್ಲ; ಅದು ಆತ್ಮಹತ್ಯೆಗೆ ಸಮಾನ. 'ಸೀದು ಕರಕಲಾಗುವುದು' ಎಂಬ ಪ್ರಯೋಗವು ವ್ಯಕ್ತಿತ್ವದ ನಾಶವನ್ನು ಸೂಚಿಸುತ್ತದೆ. ಹೆಣ್ಣು ತನ್ನ ಅಸ್ಮಿತೆಯನ್ನು ಉಳಿಸಿಕೊಳ್ಳಲು ಇಂತಹ ಸಹನೆಯನ್ನು ಮೀರಿ ನಿಲ್ಲಬೇಕು ಎಂಬುದು ಇಲ್ಲಿನ ಒಳಾರ್ಥ.

**"ನಿನ್ನ ಮಡಿಲಲ್ಲಿ ಮಲಗಿ**
**ಮತ್ತೆ ಕೇಳುತ್ತೇನೆ**
**ಈ ಎಲ್ಲಾ ಶಿಕ್ಷೆ ಯಾಕಾಗಿ?"**[5]

ಈ ನುಡಿಯ ಮೂಲಕ ಪುರಾಣಪ್ರಸಿದ್ಧ ಸೀತೆಯ ವ್ಯಥೆಯ ಮೂಲಕ ಇಡೀ ಸ್ತ್ರೀಕುಲದ ಅಸ್ತಿತ್ವದ ಪ್ರಶ್ನೆಯನ್ನು ಎತ್ತುತ್ತವೆ. ಇದು ಅವರ ಕಾವ್ಯದ ಶಕ್ತಿಶಾಲಿ ಅಭಿವ್ಯಕ್ತಿಯಾಗಿದ್ದು ಸೀತೆ ಭೂಮಿತಾಯಿಯ ಮಗಳು ಎಂಬುದು ನಂಬಿಕೆ. ಅಂತಿಮವಾಗಿ ಅವಳು ಭೂಮಿಯ

ಒಡಲನ್ನೇ ಸೇರುತ್ತಾಳೆ. ಇಲ್ಲಿ 'ನಿನ್ನ ಮಡಿಲಲ್ಲಿ ಮಲಗಿ' ಎನ್ನುವ ಸಾಲು ಹೆಣ್ಣು ಸಮಾಜದ ಕ್ರೌರ್ಯ ತಾಳಲಾರದೆ ಪ್ರಕೃತಿಯಲ್ಲಿ ಅಥವಾ ಮೂಲ ನೆಲೆಯಲ್ಲಿ ರಕ್ಷಣೆ ಮತ್ತು ಸಾಂತ್ವನ ಹುಡುಕುತ್ತಿರುವುದನ್ನು ಸೂಚಿಸುತ್ತದೆ. ಸಮಾಜ ನೀಡಿದ ನ್ಯಾಯವನ್ನು ಅವಳು ತನ್ನ ತಾಯಿಯ ಬಳಿ ನಿರೀಕ್ಷಿಸುತ್ತಾಳೆ. 'ಈ ಎಲ್ಲಾ ಶಿಕ್ಷೆ ಯಾಕಾಗಿ' ಎಂಬ ಪ್ರಶ್ನೆ ಸ್ತ್ರೀವಾದಿ ಸಂವೇದನೆಯ ಅತ್ಯಂತ ತೀಕ್ಷ್ಣವಾದ ಪ್ರಶ್ನೆ. ಸೀತೆ ಅಗ್ನಿಪರೀಕ್ಷೆಗೆ ಒಳಗಾಗಿದ್ದು ಅವಳ ತಪ್ಪಿನಿಂದಲ್ಲ; ಬದಲಾಗಿ ಸಮಾಜದ ಸಂಶಯದ ದೃಷ್ಟಿಯಿಂದ. ಹೆಣ್ಣು ಪವಿತ್ರಳಾಗಿದ್ದರೂ ಅವಳು ನಿರಂತರವಾಗಿ ತನ್ನನ್ನು ತಾನು ಸಾಬೀತುಪಡಿಸಿಕೊಳ್ಳಬೇಕಾದ ಪಿತೃ ಪ್ರಧಾನ ವ್ಯವಸ್ಥೆಯ ಕ್ರೂರತೆಯನ್ನು ಈ ಸಾಲು ಪ್ರಶ್ನಿಸುತ್ತದೆ. ಇದು ಕೇವಲ ಅಳುವಲ್ಲ; ಬದಲಾಗಿ ಇದೊಂದು ಬೌದ್ಧಿಕ ಪ್ರತಿರೋಧ. 'ಮತ್ತೆ ಕೇಳುತ್ತೇನೆ' ಎನ್ನುವ ಪದ ಪ್ರಯೋಗವು ಸೋಲನ್ನೊಪ್ಪದ ಮನಸ್ಥಿತಿಯನ್ನು ತೋರಿಸುತ್ತದೆ. ಇತಿಹಾಸದುದ್ದಕ್ಕೂ ಹೆಣ್ಣಿಗೆ ನೀಡಲಾದ ಮೌನ ನಿರ್ಬಂಧ ಮತ್ತು ಅವಮಾನಗಳನ್ನು ಶಿಕ್ಷೆ ಎಂದು ಕರೆಯುವ ಮೂಲಕ ಆ ಶಿಕ್ಷೆಗೆ ಯಾವುದೇ ನೈತಿಕ ಆಧಾರವಿಲ್ಲ ಎಂಬುದನ್ನು ಸ್ಪಷ್ಟಪಡಿಸುತ್ತಾರೆ. ಈ ಕವಿತೆ ಕೇವಲ ಸೀತೆಗೆ ಸೀಮಿತವಾಗಿಲ್ಲ; ಇಂದಿನ ಆಧುನಿಕ ಕಾಲದಲ್ಲೂ ಹೆಣ್ಣು ಅನುಭವಿಸುವ ಸಾಮಾಜಿಕ ನಿರ್ಬಂಧಗಳು ಮತ್ತು ನೈತಿಕ ಪೊಲೀಸ್‌ಗಿರಿಯನ್ನು ಈ ಸಾಲುಗಳು ಪ್ರತಿಬಿಂಬಿಸುತ್ತವೆ. ಈ ವ್ಯವಸ್ಥೆಯು ಹೇರುವ ಅಲಿಖಿತ ಕಾನೂನುಗಳು ಹೆಣ್ಣಿಗೆ ಒಂದು ರೀತಿಯ ಅನ್ಯಾಯದ ಶಿಕ್ಷೆಯೇ ಆಗಿದೆ.

ಸಬಿತಾ ಬನ್ನಾಡಿ ಅವರು ಕನ್ನಡದ ಪ್ರಮುಖ ವಿಮರ್ಶಕಿ ಮತ್ತು ಲೇಖಕಿಯಾಗಿದ್ದು ಸ್ತ್ರೀವಾದಿ ಚಿಂತನೆಯನ್ನು ಆಧುನಿಕೋತ್ತರ ಕಾಲಘಟ್ಟದಲ್ಲಿ ಹೊಸ ಉತ್ತರಕ್ಕೆ ಕೊಂಡೊಯ್ದವರು. ಅವರ ವಿಚಾರಗಳು ಕೇವಲ ಸಾಹಿತ್ಯಕ್ಕೆ ಸೀಮಿತವಾಗದೆ ಸಾಮಾಜಿಕ ಚಳುವಳಿಗಳ ಭಾಗವಾಗಿಯೂ ಗುರುತಿಸಿಕೊಂಡಿವೆ. ಇವರು ಮಹಿಳಾ ಸಾಹಿತ್ಯವನ್ನು ಕೇವಲ ಭಾವನಾತ್ಮಕ ನೆಲೆಯಲ್ಲಿ ನೋಡುವುದಿಲ್ಲ; ಬದಲಾಗಿ ಅದನ್ನು ಒಂದು ರಾಜಕೀಯ ಮತ್ತು ಸಾಮಾಜಿಕ ಶಕ್ತಿಯಾಗಿ ವಿಶ್ಲೇಷಿಸುತ್ತಾರೆ. ಸ್ತ್ರೀ ಸಂವೇದನೆಯು ಪಿತೃಪ್ರಧಾನ ವ್ಯವಸ್ಥೆಯ ಒಳಗಿನ ಸಂಘರ್ಷಗಳನ್ನು ಹೇಗೆ ಎದುರಿಸುತ್ತಿದೆ ಎಂಬುದನ್ನು ತಾರ್ಕಿಕವಾಗಿ ಮಂಡಿಸುತ್ತಾರೆ. ಆಧುನಿಕೋತ್ತರ ಸ್ತ್ರೀವಾದವು 'ಹೆಣ್ಣು' ಎಂದರೆ ಯಾರು? ಎಂಬ ಮೂಲಭೂತ ಪ್ರಶ್ನೆಯನ್ನು ಎತ್ತುತ್ತದೆ. ಸಬಿತಾ ಬನ್ನಾಡಿ ಅವರು ಹೆಣ್ಣಿನ ದೇಹ, ಮನಸ್ಸು ಮತ್ತು ನಿರ್ಧಾರಗಳ ಮೇಲೆ ಅವಳದೇ ಆದ ಸ್ವಾಯತ್ತತೆ ಇರಬೇಕೆಂದು ಪ್ರತಿಪಾದಿಸುತ್ತಾರೆ. ಅವರ ವಿಮರ್ಶಾ ಲೇಖನಗಳಲ್ಲಿ ಹೆಣ್ಣು ತನ್ನನ್ನು ತಾನು ಕಟ್ಟಿಕೊಳ್ಳುವ ಪ್ರಕ್ರಿಯೆಯನ್ನು ವಿವರಿಸುತ್ತಾರೆ. ಆಧುನಿಕೋತ್ತರ ಚಿಂತನೆಯಂತೆ ಇವರು ಎಲ್ಲಾ ಹೆಣ್ಣು ಮಕ್ಕಳ ಸಮಸ್ಯೆಗಳು ಒಂದೇ ಆಗಿರುವುದಿಲ್ಲ ಎಂದು ನಂಬುತ್ತಾರೆ. ಜಾತಿ, ವರ್ಗ, ಪ್ರಾದೇಶಿಕತೆಗಳು ಹೀಗೆ ಒಬ್ಬ ಮಹಿಳೆಯ ಅನುಭವಗಳನ್ನು ಬದಲಿಸುತ್ತವೆ ಎಂಬುದನ್ನು ಇವರು ಗಮನಿಸುತ್ತಾರೆ. ದಲಿತ ಮತ್ತು ಬಂಡಾಯ ಸಾಹಿತ್ಯದ ಹಿನ್ನೆಲೆಯಲ್ಲಿ ಸ್ತ್ರೀ ಸಂವೇದನೆಯನ್ನು ಇವರು ವಿಶ್ಲೇಷಿಸಿರುವುದು ಗಮನಾರ್ಹ. ಇವರು ಕೇವಲ ಸಿದ್ಧಾಂತಕ್ಕೆ ಅಂಟಿಕೊಳ್ಳದೆ ಮಹಿಳಾ ಚಳುವಳಿಗಳಲ್ಲಿ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡವರು. ಈ ಪ್ರಾಯೋಗಿಕ ಜ್ಞಾನವು ಅವರ ಸ್ತ್ರೀವಾದಿ ಸಂವೇದನೆಗೆ ಒಂದು ವಾಸ್ತವದ ಸ್ಪರ್ಶ ನೀಡಿದೆ. ಸಾಹಿತ್ಯವು ಸಮಾಜವನ್ನು ಬದಲಿಸುವ ಆಯುಧವಾಗಿ ಇರಬೇಕು ಎಂಬುದು ಇವರ ಆಶಯ. ಇಂತಹ ಆಶಯಗಳನ್ನು ಹೊಂದಿರುವಂತಹ ಕವಿತೆಗಳ ಮೂಲಕ ವಿಶ್ಲೇಷಣೆ ಇಲ್ಲಿ ನೋಡಲಾಗಿದೆ.

ಸಬಿತಾ ಬನ್ನಾಡಿ ಅವರು ತಮ್ಮ 'ಕೆಲವೊಮ್ಮೆ' ಕವನ ಸಂಕಲನದ ಪದ್ಯಗಳಲ್ಲಿ

ಆಧುನಿಕೋತ್ತರ ಸ್ತ್ರೀ ಸಂವೇದನೆಯನ್ನು ಅತ್ಯಂತ ಸೂಕ್ಷ್ಮವಾಗಿ ಮತ್ತು ಸಂಕೀರ್ಣವಾಗಿ ಅಭಿವ್ಯಕ್ತಿಸಿದ್ದಾರೆ. ಇಲ್ಲಿನ ಕವಿತೆಗಳು ಬದುಕಿನ ನಿರಂತರ ಓಟದಲ್ಲಿ ಹಠಾತ್ತಾಗಿ ಎದುರಾಗುವ ಕ್ಷಣಗಳನ್ನು ಹಿಡಿದಿರುತ್ತವೆ. ಹೆಣ್ಣಿನ ದೈನಂದಿನ ಏಕತಾನತೆ ನಡುವೆ ಮೂಡುವ ಸಣ್ಣ ಆಸೆಗಳು, ಕನಸುಗಳು ಮತ್ತು ವಿಚಿತ್ರ ಎನಿಸುವ ಭಾವನೆಗಳನ್ನು ಸಬಿತಾ ಅವರು ಇಲ್ಲಿ ಚಿತ್ರಿಸಿದ್ದಾರೆ. ಈ ಕವನದ ಪದ್ಯಗಳಲ್ಲಿ ಮೌನವು ಒಂದು ದೊಡ್ಡ ಶಕ್ತಿಯಾಗಿ ಬಳಕೆಯಾಗಿದೆ. ಹೆಣ್ಣು ಹೊರನೋಟಕ್ಕೆ ಶಾಂತವಾಗಿದ್ದರೂ ಅವಳ ಅಂತರಂಗದಲ್ಲಿ ನಡೆಯುವ ತಳಮಳ, ಸಮಾಜಕ್ಕೆ ಮುಚ್ಚಿಟ್ಟ ಅವಳ ನಿಜವಾದ ಅಸ್ಮಿತೆಯ ಹುಡುಕಾಟವನ್ನು ಕವಿತೆಗಳು ಧ್ವನಿಸುತ್ತವೆ. ಕೆಲವೊಮ್ಮೆ ನಮಗೆ ನಾವೇ ಅಪರಿಚಿತರಾಗುವ ಸ್ಥಿತಿಯನ್ನು ಇಲ್ಲಿನ ಸಾಲುಗಳು ಮಾರ್ಮಿಕವಾಗಿ ವಿವರಿಸುತ್ತದೆ. ಸಬಿತಾ ಬನ್ನಾಡಿ ಅವರು ಪುರುಷರ ಅಧಿಪತ್ಯದ ವ್ಯವಸ್ಥೆಯನ್ನು ನೇರವಾಗಿ ಖಂಡಿಸುವ ಬದಲು ಸಂಬಂಧಗಳ ಒಳಗಿನ ಅಸಮಾನತೆಯನ್ನು ಅತ್ಯಂತ ಕಾವ್ಯಾತ್ಮಕವಾಗಿ ವಿಮರ್ಶಿಸುತ್ತಾರೆ. ಪ್ರೀತಿ, ಸ್ನೇಹ ಮತ್ತು ಸಂಸಾರದ ಹೆಸರಿನಲ್ಲಿ ಹೆಣ್ಣಿನ ವ್ಯಕ್ತಿತ್ವವು ಹೇಗೆ ಕರಗಿ ಹೋಗುತ್ತದೆ ಮತ್ತು ಆ ಸಂದರ್ಭದಲ್ಲಿ ಅವಳು ಅನುಭವಿಸುವ ಏಕಾಂಗಿತನವನ್ನು ಇಲ್ಲಿನ ಕವಿತೆಗಳು ಕಟ್ಟಿಕೊಡುತ್ತವೆ. ಆಧುನಿಕೋತ್ತರ ಸ್ತ್ರೀವಾದದ ಆಶಯದಂತೆ ಇಲ್ಲಿ ದೇಹವು ಕೇವಲ ಭೌತಿಕ ವಸ್ತುವಲ್ಲ; ಅದು ಅನುಭವಗಳ ಕಣಜ. ಹೆಣ್ಣಿನ ದೇಹದ ಮೇಲಿನ ಸಮಾಜದ ನಿಯಂತ್ರಣ ಮತ್ತು ಅದರಿಂದ ಬಿಡುಗಡೆ ಹೊಂದಲು ಮನಸ್ಸು ನಡೆಸುವ ಪ್ರಯತ್ನಗಳನ್ನು ಇಲ್ಲಿ ನೋಡಬಹುದು.

**“ಬಟ್ಟೆಯ ಕತ್ತರಿಸುವ ಕತ್ತರಿ ಅವಳ ಕನಸುಗಳ ಕತ್ತರಿಸುತ್ತದೆ**
**ಜೋಡಿಸಿ ಹೊಲಿಯುವ ಕೈಗಳು ಮತ್ತೊಂದು ಕನಸ ಹೊಲಿಯುತ್ತದೆ**
**ಮೇಲ್ವಿಚಾರಕನ ಸೂಜಿಗಣ್ಣು ಅವಳು ಕತ್ತೆತ್ತದಂತೆ ಚುಚ್ಚುತ್ತದೆ**
**ಅರೆಹೊಟ್ಟೆಯ ನಿಶ್ಯಕ್ತ ಕಾಲು ಸೆಟೆದುಕೊಳ್ಳದಂತೆ ವೇಗವಾಗಿ ತುಳಿಯುತ್ತದೆ**
**ಒತ್ತರಿಸಿ ಬರುವ ಬಾಯಾರಿಕೆಯು ಜಿಪ್ ಏರಿಸಿದೆ**
**ಜಲಬಾಧೆ ತೀರಿಸಿಕೊಳ್ಳಲೂ ಬೇಕು ಒಪ್ಪಿಗೆಯ ಪತ್ರ**
**ನೀರೆಲ್ಲ ನೆರಿಗೆಯಾಗಿ ಪೋಷಾಕು ಸಿಂಗಾರಗೊಳ್ಳುತ್ತದೆ”[6]**

ಈ ಪದ್ಯವೂ ಗಾರ್ಮೆಂಟ್ ಕಾರ್ಖಾನೆಗಳಲ್ಲಿ ದುಡಿಯುವ ಕಾರ್ಮಿಕ ಸ್ತ್ರೀಯರ ಶೋಷಿತ ಬದುಕಿನ ಚಿತ್ರಣ. ಇಲ್ಲಿ ಕೆಲಸದ ಉಪಕರಣಗಳು, ದೇಹದ ಅಂಗಗಳು, ಕನಸುಗಳು ಎಲ್ಲವೂ ಒಂದೇ ವ್ಯವಸ್ಥೆಯೊಳಗೆ ಸಿಕ್ಕಿಹಾಕಿಕೊಂಡಿರುವಂತೆ ತೋರಿಸುತ್ತದೆ. ಇಲ್ಲಿ ಕತ್ತರಿ ಕೇವಲ ಬಟ್ಟೆ ಕತ್ತರಿಸುವ ಸಾಧನವಲ್ಲ; ಅದು ಕಾರ್ಮಿಕರ ಬಾಲ್ಯ, ಆಸೆ, ಭವಿಷ್ಯಗಳನ್ನು ಕತ್ತರಿಸುವ ಕ್ರೂರ ವ್ಯವಸ್ಥೆಯ ಸಂಕೇತ. ಕಷ್ಟದ ಜೀವನ ಅವಳ ಕನಸುಗಳಿಗೆ ಉಳಿವೇ ಕೊಡದು. ಒಂದು ಕನಸು ನಾಶವಾದರೂ ಮತ್ತೊಂದು ಕನಸನ್ನು ಅವಳು ಹೊಲಿಯುತ್ತಾಳೆ. ಬದುಕು ಮುಂದುವರಿಯಬೇಕೆಂಬ ಹಟ ನಿರಂತರವಾದ ಆಶಾವಾದ ಇದು ಶೋಷಣೆಯ ನಡುವೆಯೂ ಜೀವಂತವಿರುವ ಮಾನವೀಯ ಹಂಬಲ. ಮೇಲ್ವಿಚಾರಕನ ನೋಟವೇ ಸೂಜಿಯಂತೆ ಚುಚ್ಚುವುದು ನಿಯಂತ್ರಣ, ಭಯ, ಮಾನಸಿಕ ಹಿಂಸೆ, ಸ್ತ್ರೀ ತಲೆ ಎತ್ತಿ ಮಾತನಾಡದಂತೆ ಮಾಡುವ ಶಕ್ತಿಯ ರೂಪಕ ಇದು. ಹಸಿವು, ದಣಿವು ಇದ್ದರೂ ಕಾಲು ನಿಲ್ಲಬಾರದು. ಯಂತ್ರದಂತೆ ಕೆಲಸ ಮಾಡಬೇಕಾದ ಅನಿವಾರ್ಯತೆ ದೇಹಕ್ಕಿಂತ ಉತ್ಪಾದನೆ ಮುಖ್ಯವಾಗಿರುವ ವ್ಯವಸ್ಥೆ. ಒತ್ತರಿಸಿ ಬರುವ ಬಾಯಾರಿಕೆಯನ್ನು ಮೌನಗೊಳಿಸಲಾಗಿದೆ. ದೇಹದ ಮೂಲಭೂತ ಅಗತ್ಯಗಳನ್ನು ವ್ಯಕ್ತಪಡಿಸುವ ಹಕ್ಕಿಲ್ಲ. ಮೌನವೇ ಬದುಕಿನ ನಿಯಮ. ಮೂತ್ರ ವಿಸರ್ಜನೆಗೂ ಅನುಮತಿ ಬೇಕು ಎನ್ನುವುದು ಮಾನವೀಯತೆಯ ಸಂಪೂರ್ಣ ಹರಣ. ಕಾರ್ಮಿಕನನ್ನು ಯಂತ್ರಕ್ಕಿಂತಲೂ ಕೆಳಗೆ ಇಳಿಸುವ ಕ್ರೂರತೆ, ಕಾರ್ಮಿಕರು ಸುರಿಸುವ

ಬೆವರಿನಿಂದ ದೇಹವೆಲ್ಲಾ ಸೊರಗಿ ಹೋಗುತ್ತದೆ. ಆದರೆ ಪೋಷಕ ಅಥವಾ ಮಾಲೀಕ ಮಾತ್ರ ಐಷಾರಾಮಿಯಲ್ಲಿ ಶೃಂಗಾರಗೊಳ್ಳುತ್ತದೆ. ಇದು ಕೇವಲ ಒಬ್ಬ ಸ್ತ್ರೀಯ ಕಥೆಯಲ್ಲ; ಇದು ಸಮಗ್ರ ಕಾರ್ಮಿಕರ ವರ್ಗದ, ವಿಶೇಷವಾಗಿ ಸ್ತ್ರೀ ಕಾರ್ಮಿಕರ ದುರಂತದ ಕಾವ್ಯಾತ್ಮಕ ದಾಖಲೆ. ಸ್ತ್ರೀವಾದ, ಕಾರ್ಮಿಕ ವರ್ಗದ ಚಿಂತನೆ ಇಲ್ಲಿ ಒಂದಾಗುತ್ತದೆ. ಶ್ರಮದ ಮೌಲ್ಯವನ್ನು ಹೀರಿಕೊಳ್ಳುವ ವ್ಯವಸ್ಥೆಯ ವಿರುದ್ಧ ಪ್ರತಿಭಟನೆ. ದೇಹ, ಕನಸು, ಅಗತ್ಯ ಎಲ್ಲವನ್ನು ನಿಯಂತ್ರಿಸುವ ಅಧಿಕಾರಶಾಹಿ ವ್ಯವಸ್ಥೆಯ ತೀವ್ರ ಟೀಕೆ. ಆಧುನಿಕ ಕನ್ನಡ ಸಾಮಾಜಿಕ ಸ್ತ್ರೀವಾದಿ ಕಾವ್ಯದ ಬಲವಾದ ಉದಾಹರಣೆಯಾಗಿದೆ.

ಒಟ್ಟಾರೆಯಾಗಿ ಹೇಳುವುದಾದರೆ ಕನ್ನಡ ಸಾಹಿತ್ಯದಲ್ಲಿ ಆಧುನಿಕೋತ್ತರ ಸ್ತ್ರೀವಾದವು ಕೇವಲ ಲಿಂಗ ಸಮಾನತೆಯ ಹೋರಾಟವಾಗಿ ಉಳಿಯದೆ ಹೆಣ್ಣಿನ ಅಸ್ಮಿತೆಯನ್ನು ಮರು ಸೃಷ್ಟಿಸುವ ಬೃಹತ್ ಪ್ರಕ್ರಿಯೆಯಾಗಿ ಹೊರಹೊಮ್ಮಿದೆ. ವಿಜಯಾದಬ್ಬೆ ಅವರು ಹಾಕಿಕೊಟ್ಟ ತಾತ್ವಿಕ ಅಡಿಪಾಯದ ಮೇಲೆ ಸ. ಉಷಾ, ನೇಮಿಚಂದ್ರ, ಬಿ.ಟಿ. ಲಲಿತನಾಯಕ್ ಮತ್ತು ಸಬಿತಾ ಬನ್ನಾಡಿ ಅವರಂತಹ ಲೇಖಕಿಯರು ಸ್ತ್ರೀ ಸಂವೇದನೆಯನ್ನು ವೈವಿಧ್ಯಮಯ ನೆಲೆಗಳಲ್ಲಿ ವಿಸ್ತರಿಸಿದ್ದಾರೆ. ಹೆಣ್ಣಿನ ಸಮಸ್ಯೆಗಳು ಕೇವಲ ಮನೆಯ ನಾಲ್ಕು ಗೋಡೆಗಳಿಗೆ ಸೀಮಿತವಲ್ಲ; ಅವು ಜಾತಿ, ವರ್ಗ, ಕಾರ್ಮಿಕ ವಲಯ ಮತ್ತು ಜಾಗತಿಕ ರಾಜಕಾರಣದೊಂದಿಗೆ ಬೆಸೆದುಕೊಂಡಿವೆ. ದೇಹದ ಮೇಲಿನ ಹಕ್ಕು ಮತ್ತು ಶ್ರಮದ ಗೌರವವನ್ನು ಈ ಸಾಹಿತ್ಯವು ಮುನ್ನೆಲೆಗೆ ತಂದಿದೆ. ಪುರಾಣದ ಸೀತೆಯಿಂದ ಹಿಡಿದು ಇಂದಿನ ಗಾರ್ಮೆಂಟ್ಸ್ ಕಾರ್ಮಿಕ ಮಹಿಳೆಯರಿಗೆ ಎಲ್ಲರೂ ಪಿತೃ ಪ್ರಧಾನ ವ್ಯವಸ್ಥೆಯ ಮೌನ ಮತ್ತು ಶಿಕ್ಷೆಗಳನ್ನು ಪ್ರಶ್ನಿಸುವ ಶಕ್ತಿಯನ್ನು ಪಡೆದುಕೊಂಡಿದ್ದಾರೆ. ಈ ಕಾಲಘಟ್ಟದ ಸ್ತ್ರೀವಾದಿ ಬರಹಗಳು ಕೇವಲ ಸ್ತ್ರೀಯರಿಗಾಗಿ ಮಾತ್ರವಲ್ಲ; ಬದಲಾಗಿ ಒಂದು ಸಮಾನತೆಯ ಮತ್ತು ಮಾನವೀಯ ಸಮಾಜದ ನಿರ್ಮಾಣಕ್ಕಾಗಿ ಕಾವ್ಯವನ್ನು ಖಡ್ಗವಾಗಿ ಬಳಸುವ ದಾರಿಯನ್ನು ತೋರಿಸಿಕೊಟ್ಟಿದೆ. ಇದು ಸಾಹಿತ್ಯದ ಚೌಕಟ್ಟನ್ನು ಮೀರಿ ಸಾಮಾಜಿಕ ಬದಲಾವಣೆಯ ದಿಕ್ಸೂಚಿಯಾಗಿ ನಿಂತಿದೆ.

**ಕೊನೆ ಟಿಪ್ಪಣಿಗಳು:**

1. ವೈದೇಹಿ, (1990), ಬಿಂದು ಬಿಂದಿಗೆ, ಸಾಗರ: ಅಕ್ಷರ ಪ್ರಕಾಶನ, ಪು.ಸಂ. 2
2. ಪ್ರತಿಭಾ ನಂದಕುಮಾರ, (1983), ನಾವು ಹುಡುಗಿಯರೇ ಹೀಗೆ, ಬೆಂಗಳೂರು: ಕನ್ನಡ ಸಂಘ, ಕ್ರೈಸ್ಟ್ ಕಾಲೇಜ್ ಪು.ಸಂ. 3
3. ಉಷಾ ಸ., (1976), ಈ ನೆಲದ ಹಾಡು, ಸಾಗರ: ಅಕ್ಷರ ಪ್ರಕಾಶನ, ಪು.ಸಂ. 2
4. ವಿಜಯಾ ದಬ್ಬೆ, (1981), ಇತಿಹಾಸ ಪುಟಗಳಿಂದ, ಮೈಸೂರು: ಸಂವಹನ ಪ್ರಕಾಶನ ಪು.ಸಂ. 4
5. ಅದೇ, ಪು.ಸಂ. 5
6. ಸಬಿತಾ ಬನ್ನಾಡಿ, (2004), ಮಣ್ಣಿನ ಹಾದಿ, ಮೈಸೂರು: ಸಂವಹನ ಪ್ರಕಾಶನ ಪು.ಸಂ. 41

## ಪರಾಮರ್ಶನ ಗ್ರಂಥಗಳು:


1. ಪ್ರತಿಭಾ ನಂದಕುಮಾರ, (1983), ನಾವು ಹುಡುಗಿಯರೇ ಹೀಗೆ, ಬೆಂಗಳೂರು: ಕನ್ನಡ ಸಂಘ, ಕ್ರೈಸ್ಟ್ ಕಾಲೇಜ್.
2. ಜಿ. ವೆಂಕಟಸುಬ್ಬಯ್ಯ (ಸಂ) ಮತ್ತು ರಾಜಶ್ರೀ ಸತೀಶ್ (ಸ.ಸಂ), (2004), ಕನ್ನಡ ಕ್ಲಿಷ್ಟ ಪದಕೋಶ, ಬೆಂಗಳೂರು: ಪ್ರಿಸಂ ಬುಕ್ಸ್ ಪ್ರೈವೇಟ್ ಲಿಮಿಟೆಡ್.
3. ವಿಜಯಾ ದಬ್ಬೆ, (1981), ಇತಿಹಾಸ ಪುಟಗಳಿಂದ, ಮೈಸೂರು: ಸಂವಹನ ಪ್ರಕಾಶನ.
4. ವೈದೇಹಿ, (1990), ಬಿಂದು ಬಿಂದಿಗೆ, ಸಾಗರ: ಅಕ್ಷರ ಪ್ರಕಾಶನ.
5. ಉಷಾ ಸ., (1976), ಈ ನೆಲದ ಹಾಡು, ಸಾಗರ: ಅಕ್ಷರ ಪ್ರಕಾಶನ.
6. ಸಬಿತಾ ಬನ್ನಾಡಿ, (2004), ಮಣ್ಣಿನ ಹಾದಿ, ಮೈಸೂರು: ಸಂವಹನ ಪ್ರಕಾಶನ.
7. ಶಿವರಾಮ ಕಾರಂತ, (1990), ಸಿರಿಗನ್ನಡ ಅರ್ಥಕೋಶ, ಬೆಂಗಳೂರು: ಎಸ್.ಬಿ.ಎಸ್. ಪ್ರಕಾಶನ.


**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.